ಎಂ. ಜಿ. ನಂಜುಂಡಾರಾಧ್ಯ

ಕವಿ ಭಟ್ಟನಾರಾಯಣ

ಪ್ರಚಾರ ಪುಸ್ತಕಮಾಲೆ—೧೭೮

ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೧೯೭೧.

ಪ್ರಚಾರ ಪುಸ್ತಕಮಾಲೆ—೧೭೪

ಕವಿ ಭಟ್ಟನಾರಾಯಣ

ಎಂ. ಜಿ. ನಂಜುಂಡಾರಾಧ್ಯ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಮೊದಲನೆಯ ಮುದ್ರಣ : ೧೯೭೧
೫,೦೦೦ ಪ್ರತಿಗಳು

ಸಾಧಾರಣ ಪ್ರತಿ : ೨೫ ಪೈಸೆ
ಉತ್ತಮ ಪ್ರತಿ : ೪೭ ಪೈಸೆ

ಪ್ರಕಾಶಕರು
ಡೈರೆಕ್ಟರ್ ' ಪ್ರಸಾರಾಂಗ '
ಮಾನಸ ಗಂಗೋತ್ರಿ, ಮೈಸೂರು-೬

ಮುದ್ರಕರು
ಕರುಣೋದಯ ಪ್ರಿಂಟಿಂಗ್ ಪ್ರೆಸ್
ವಿ. ವಿ. ಮೊಹಲ್ಲಾ, ಮೈಸೂರು-೨

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ, ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇರ್ಷ' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರಕಾರ್ಯವನ್ನು ಬಹಳ ಸಮರ್ಪಕರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು

ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲಿ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೆ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾ ನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಅಚ್ಚಿನ

ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತ ವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತು ನೂರ ಎಪ್ಪತ್ತೇಳು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಎಂ. ಜಿ. ನಂಜುಂಡಾರಾಧ್ಯರ ಕವಿ ಭಟ್ಟನಾರಾಯಣ ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು

ದೇ. ಜವರೇಗೌಡ
ವೈಸ್-ಛಾನ್ಸಲರ್

ಅರಿಕೆ

'ಕವಿಶ್ರೇಷ್ಠ'ನೆಂಬ ಬಿರುದಿಗೆ ಪಾತ್ರನಾಗದಿದ್ದರೂ ಭಟ್ಟನಾರಾಯಣನಿಗೆ ಸಂಸ್ಕೃತ ಶ್ರೇಷ್ಠ ಕವಿಮಾಲೆಯಲ್ಲಿ ಸಮುಚಿತ ಸ್ಥಾನ ಮೀಸಲು. ಮಹಾಭಾರತ ಕಥೆಯ ಹೃದಯವನ್ನು ದೃಶ್ಯಕ್ಕೆ ಅಳವಡಿಸುವಲ್ಲಿ ಭಾಸ ಮೊದಲಿಗ. ಆತ ಮಹಾಭಾರತದ ಮುಖ್ಯ ಭಾಗಗಳಿಂದ ಸಾರವತ್ತಾದ ಒಂದೊಂದು ಘಟನೆಯನ್ನು ಆರಿಸಿಕೊಂಡು ಪಾಂಚರಾತ್ರ, ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತಘಟೋತ್ಕಜ, ಕರ್ಣಭಾರ ಮತ್ತು ಊರುಭಂಗ ಎಂಬ ಆರು ಖಂಡರೂಪಕಗಳನ್ನು ರೂಪಿಸಿದರೆ, ಭಟ್ಟನಾರಾಯಣ ಶ್ರೀ ಕೃಷ್ಣಸಂಧಾನದಿಂದ ಹಿಡಿದು ಕೌರವವಧೆಯ ವರೆಗಿನ ವಿಸ್ತಾರವಾದ ಕಥಾಭಾಗವನ್ನು ಏಳು ಅಂಕಗಳ ನಾಟಕವನ್ನು ರಚಿಸಿದ್ದಾನೆ. ಅನೇಕ ಕನ್ನಡ ಕವಿಶ್ರೇಷ್ಠರಿಗೆ ಸ್ಫೂರ್ತಿನೀಡಿದ ಈ ಕವಿ ಹಾಗೂ ಕೃತಿ ಪರಿಚಯ ಕನ್ನಡಿಗರಿಗೆ ಅಗತ್ಯ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ ಈ ವಿಷಯವನ್ನು ಕುರಿತು ಮಾಡಿದ ಭಾಷಣಗಳ ಲಿಖಿತ ರೂಪ ಈ ಪುಟ್ಟ ಹೊತ್ತಗೆ. ಸಹೃದಯ ಲೋಕ ಇದರ ರಸ–ರುಚಿಗಳನ್ನು ಸವಿದು ತಣಿಯುವಂತಾದರೆ ಲೇಖಕ ಧನ್ಯ. ಈ ಸದವಕಾಶ ನೀಡಿದ ಪ್ರಸಾರಾಂಗದ ಅಧಿಕಾರಿ ವರ್ಗಕ್ಕೆ ಮತ್ತು ಅಂದವಾಗಿ ಮುದ್ರಿಸಿದ ಕರುಣೋದಯ ಪ್ರಿಂಟಿಂಗ್ ಪ್ರೆಸ್ಸಿನ ಒಡೆಯರಿಗೆ ನಾನು ಋಣಿ.

೧೫–೩–೧೯೭೧
ಮೈಸೂರು

ಎಂ. ಜಿ. ನಂಜುಂಡಾರಾಧ್ಯ.

ವಿಷಯಸೂಚಿಕೆ

೧.	ಪೀಠಿಕೆ	೧
೨.	ಕಾಲ, ದೇಶ ಮತ್ತು ಮತ	೨
೩.	ಕಥಾ ಸಂಗ್ರಹ	೬
೪.	ಪಾತ್ರಚಿತ್ರಣ	೧೨
೫.	ಮಹಾಭಾರತ ಕಥಾವಸ್ತು– ಭಟ್ಟನಾರಾಯಣನ ಕೈವಾಡ	೩೫
೬.	ರಸಾವಿಷ್ಕಾರ	೪೧
೭.	ಶೈಲಿ	೪೭
೮.	ನುಡಿಗಟ್ಟುಗಳು	೫೦
೯.	ವೇಣೀಸಂಹಾರದ ಅನುಕರಣ ಕನ್ನಡ ಕಾವ್ಯಗಳಲ್ಲಿ	೫೨
೧೦.	ಕಾವ್ಯಸಮೀಕ್ಷೆ	೫೯

ಕವಿ ಭಟ್ಟನಾರಾಯಣ

೧. ಪೀಠಿಕೆ

ಪ್ರತಿಯೊಬ್ಬ ಮಾನವನೂ ದುಃಖವನ್ನು ದೂರಮಾಡಿ ಆನಂದವನ್ನು ಅನುಭವಿಸಲು ಹಾತೊರೆಯುತ್ತಾನೆ. ಈ ಆನಂದವು **ಬ್ರಹ್ಮಾನಂದ, ಕಾಂತಾನಂದ** ಮತ್ತು **ಕಾವ್ಯಾನಂದ**ವೆಂದು ಮೂರುವಿಧ. ಇವುಗಳಲ್ಲಿ ಮೊದಲನೆಯದು ಸ್ವಾಭಾವಿಕವಾಗಿ ಕೇವಲ ವೈರಾಗ್ಯಧನರಾದ ಮಹಾ ತಪಸ್ವಿಗಳಿಗೆ ಸಾಧ್ಯ. ಕಾಂತಾನಂದವು ಕೂಡ ಇಚ್ಛೆಯನ್ನು ಅರಿತು ನಡೆವ ಸತೀಮಣಿ ಯನ್ನು ಪಡೆದ ಅದೃಷ್ಟಶಾಲಿಗಳಾದ ಕೆಲವರಿಗೆ ಮಾತ್ರ ಲಭ್ಯ. ಕಾವ್ಯಾನಂದವು ಹಾಗಲ್ಲ. ಅದು ಜಾತಿ, ಮತ, ಅಂತಸ್ತು, ಅಧಿಕಾರಗಳ ತಾರತಮ್ಯವಿಲ್ಲದೆ ಸಹೃದಯರಾದ ಎಲ್ಲರಿಗೂ ಸುಲಭಸಾಧ್ಯವೂ ಸ್ವಸಂವೇದ್ಯವೂ ಆದ ಮಹಾಭಾಗ್ಯ! ಇದು ಸಾರಸ್ವತಯೋಗಸಿದ್ಧಿ! ಕತೆ, ಕವಿತೆ, ಕಾದಂಬರಿ ಅಥವಾ ಕಾವ್ಯಾದಿಗಳನ್ನು ಓದುವಾಗ, ಇಲ್ಲವೆ ನಾಟಕ, ಸಿನೇಮಾದಿ ಗಳನ್ನು ನೋಡುವಾಗ ನಾವು ಎಲ್ಲ ಕಷ್ಟಕಾರ್ಪಣ್ಯಗಳನ್ನು ಮರೆತು ಆನಂದರಸಮಗ್ನರಾಗಿರುವುದು ಎಲ್ಲರ ಅನುಭವ ದಲ್ಲಿಯೂ ಇದೆ.

ರಸಾಭಿನಿವೇಶವನ್ನು ಉಂಟುಮಾಡುವ ಸಾಮಗ್ರಿಗಳಲ್ಲಿ ನಾಟಕ ಕಾವ್ಯಕ್ಕಿಂತ ಹೆಚ್ಚು ಸಮರ್ಥ. **'ಕಾವ್ಯೇಷು ನಾಟಕಂ ರಮ್ಯಂ'** ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ. ಮೇಲಾಗಿ

ನಾಟಕ ವಿವಿಧ ಅಭಿರುಚಿಯುಳ್ಳ ಜನರಿಗೆ ಆನಂದವನ್ನು ಉಂಟುಮಾಡುವಂತಹ ಬಗೆ ಬಗೆಯ ಭಕ್ಷ್ಯ ಭೋಜ್ಯಾದಿಗಳಿರುವ ಒಂದು ಸಮಾರಾಧನೆ.

ಸಂಸ್ಕೃತ ನಾಟಕಗಳಲ್ಲಿ ಕವಿ ಭಟ್ಟನಾರಾಯಣನ **ವೇಣೀಸಂಹಾರವೂ** ಒಂದು. ಸಂಸ್ಕೃತ ಸಾಹಿತ್ಯದಲ್ಲಿ ಸುಪ್ರಸಿದ್ಧ ಲಾಕ್ಷಣಿಕರೆನಿಸಿರುವ ವಾಮನ, ಧನಿಕ ಮುಂತಾದವರು ತಮ್ಮ 'ಕಾವ್ಯಾಲಂಕಾರಸೂತ್ರ' ಮತ್ತು 'ದಶರೂಪಕ' ಇತ್ಯಾದಿಗಳಲ್ಲಿ ಈ ನಾಟಕದಿಂದ ವಿಪುಲವಾದ ಉದಾಹರಣೆಗಳನ್ನು ತೆಗೆದುಕೊಂಡಿರುವುದು ಈ ಕೃತಿಯ ಉತ್ಕೃಷ್ಟತೆಗೆ ನಿದರ್ಶನ. ಮೇಲಾಗಿ ಕನ್ನಡ ಉದ್ದಾಮ ಕವಿಗಳೆನಿಸಿರುವ ಪಂಪ, ರನ್ನರ ಕಾವ್ಯಸ್ಫೂರ್ತಿಗೆ ಕಾರಣವಾದ ಈ ನಾಟಕ ಕನ್ನಡಿಗರಿಗಂತೂ ಅತ್ಯಂತ ಆದರಣೀಯವೆಂದರೆ ಅತ್ಯುಕ್ತಿಯಲ್ಲ. ಪಂಪಭಾರತದ ಹದಿಮೂರನೆಯ ಆಶ್ವಾಸ ಮತ್ತು ಗದಾಯುದ್ಧದ ಬಹು ಭಾಗ ವೇಣೀಸಂಹಾರದಿಂದ ಸ್ಫೂರ್ತಿ ಪಡೆದಿರುವುದಲ್ಲದೆ ಇದರಲ್ಲಿನ ಅನೇಕ ಪದ್ಯಗಳನ್ನು, ನುಡಿಗಟ್ಟುಗಳನ್ನು ಮತ್ತು ವಾದಸರಣಿಗಳನ್ನೂ ಸಹ ಈ ಮಹಾಕವಿಗಳು ಸ್ವೀಕರಿಸಿರುವವರೆಂದಮೇಲೆ ವೇಣೀಸಂಹಾರದ ಸ್ಥಾನವನ್ನು ಬೇರೆ ಹೇಳಬೇಕಾಗಿಲ್ಲ.

೨. ಕಾಲ, ದೇಶ ಮತ್ತು ಮತ

'ತದಿದಂ ಕವೇಃ ಮೃಗರಾಜಲಕ್ಷ್ಮಣೋ ಭಟ್ಟನಾರಾಯಣಸ್ಯ ಕೃತಿಂ ವೇಣೀಸಂಹಾರಂ ನಾಮ ನಾಟಕಂ

ಪ್ರಯೋಕ್ತುಮುದ್ಯತಾ ವಯಂ' ಎಂಬ ಸೂತ್ರಧಾರನ ಮಾತಿನಲ್ಲಿ ಕವಿ ಹಾಗೂ ಕೃತಿಯ ಹೆಸರುಗಳು ಸ್ಪಷ್ಟವಾಗಿವೆ. ಆದರೆ ಆತನ ಕಾಲ ಮತ್ತು ದೇಶಾದಿಗಳ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ.

ಕವಿಯ ಕಾಲದ ಬಗೆಗೆ ವಿಚಾರ ಮಾಡುವಾಗ ಮುಂದೆ ಕಾಣಿಸಿರುವ ವಿದ್ವಾಂಸರ ಆಶಯಗಳನ್ನು ನಿರ್ದೇಶಿಸದೆ ವಿಧಿಯಿಲ್ಲ. ಇವರಲ್ಲಿ ಶ್ರೀಯುತ ಗ್ರಿಲ್ ಎಂಬುವನು ಭಟ್ಟನಾರಾಯಣ ಕ್ರಿ.ಶ.ಸು. ೬ನೆಯ ಶತಮಾನದವನೆಂದು ಉಲ್ಲೇಖಿಸಿದ್ದಾನೆ.[೧] ವಿಲ್ಸನ್ ಮಹಾಶಯ, ಈತನು ಕ್ರಿ.ಶ. ಎಂಟು ಅಥವಾ ಒಂಬತ್ತನೆಯ ಶತಮಾನದವನೆಂದು ಅಭಿಪ್ರಾಯಪಟ್ಟಿದ್ದಾನೆ.[೨] ವೇಬರ್ ಪಂಡಿತನು ಭಟ್ಟನಾರಾಯಣ ಕ್ರಿ.ಶ. ಒಂಬತ್ತನೆಯ ಶತಮಾನಕ್ಕಿಂತ ಹಿಂದಿನವ ಎಂದಿದ್ದಾನೆ.[೩] 'ಕಾವ್ಯಾಲಂಕಾರಸೂತ್ರವೃತ್ತಿ' ಮತ್ತು 'ಕಾಶಿಕಾ ವೃತ್ತಿ' ಗಳನ್ನು ಬರೆದವನು ಪರಮ ವೈಯಾಕರಣ ವಾಮನ ಎಂದು ಅನೇಕ ವಿದ್ವಾಂಸರ ಅಭಿಪ್ರಾಯ. ಪ್ರಸಿದ್ಧ ಚೀನಾ ಯಾತ್ರಿಕ ಇತ್‌ಸಿಂಗ್ ಕ್ರಿ. ಶ. ೬೬೦ರಲ್ಲಿ ಈ ವಾಮನ ಗತಿಸಿದನೆಂದು ಹೇಳುತ್ತಾನೆ. ಈ ವಾಮನ ತನ್ನ ಕಾವ್ಯಾಲಂಕಾರ

---

೧. ಶ್ರೀ ಗ್ರಿಲ್ ಮಹಾಶಯನಿಂದ ೧೮೭೧ರಲ್ಲಿ ಸಂಪಾದಿಸಿದ ವೇಣೀಸಂಹಾರದ ಉಪೋದ್ಘಾತ.

೨. ಶ್ರೀ ವಿಲ್ಸನ್ ವಿರಚಿತ ಹಿಂದೂ ಥಿಯೇಟರ್ ಎಂಬ ಗ್ರಂಥ.

೩. ದಿ ಹಿಸ್ಟರಿ ಆಫ್ ಸಂಸ್ಕೃತ ಲಿಟರೇಚರ್.

ದಲ್ಲಿ ವೇಣೀಸಂಹಾರದಿಂದ ಅನೇಕ ಉದಾಹರಣೆಗಳನ್ನು ಉದ್ಧರಿಸಿರುವುದರಿಂದ ವೇಣೀಸಂಹಾರ ಕರ್ತೃ ಭಟ್ಟನಾರಾಯಣ ಅವನಿಗಿಂತ ಹಿಂದಿನವನು ಎಂದು ಕೆಲವರು ವಾದಿಸುತ್ತಾರೆ. ಆದರೆ ಕಾಶಿಕಾವೃತ್ತಿಕಾರ ವಾಮನ, ಕಾವ್ಯಾಲಂಕಾರ ಸೂತ್ರಕಾರ ವಾಮನನಿಗಿಂತ ಭಿನ್ನನಾಗಿದ್ದ ಪಕ್ಷದಲ್ಲಿ ಮೇಲಿನ ವಾದ ನಿಲ್ಲುವುದಿಲ್ಲ. ಮತ್ತೆ ಕೆಲವರು ಕಾವ್ಯಾಲಂಕಾರಕರ್ತೃ ಕ್ರಿ.ಶ. ೭೭೯–೮೧೩ರ ಕಾಶ್ಮೀರದ ಜಯಾಪೀಡನ ಆಸ್ಥಾನ ಮಂತ್ರಿ ಎಂದು 'ರಾಜತರಂಗಿಣಿ' ಯಲ್ಲಿ ನಿರ್ದೇಶಿಸಿರುವುದಾಗಿ ಹೇಳುತ್ತಾರೆ.[೪] ಅಂದಮೇಲೆ ಈ ವಾಮನನಿಂದ ಉಲ್ಲೇಖಿಸಲ್ಪಟ್ಟ ವೇಣೀಸಂಹಾರ ಕರ್ತೃ ಕ್ರಿ. ಶ. ೮೦೦ಕ್ಕಿಂತ ಹಿಂದಿನವನೆಂದು ಸ್ಥೂಲವಾಗಿ ಹೇಳಬಹುದು.

ಕವಿಯ ದೇಶದ ವಿಷಯದಲ್ಲಿಯೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ನಾಟಕ ಪ್ರಸ್ತಾವನೆಯಲ್ಲಿ 'ಕವೇಃ ಮೃಗರಾಜಲಕ್ಷ್ಮಣಃ ಭಟ್ಟನಾರಾಯಣಸ್ಯ ಕೃತಿಂ....' ಎಂಬಲ್ಲಿ ಮೃಗರಾಜ ಎಂಬುದು ಕವಿಯ ಉಪನಾಮ ಎಂದು ಕೆಲವರು ಊಹಿಸಿದ್ದಾರೆ. 'ಮೃಗರಾಜ' ಎಂದರೆ ಸಿಂಹ. ಇದರಿಂದ ಕವಿ 'ಸಿಂಹ' ಎಂಬ ಉಪನಾಮವುಳ್ಳ ಔತ್ತರೇಯನಿರಬಹುದೆಂದು ಅವರ ಆಶಯ. 'ಭಟ್ಟ' ಎಂಬುದು ಬ್ರಾಹ್ಮಣರ ಉಪನಾಮ. 'ಸಿಂಹ' ಎಂಬ

---

೪. ಮನೋರಥಃ ಶಂಖದತ್ತಃ ಚಟಕಃ ಸಂಧಿಮಾಂಸ್ತಥಾ ।
ಬಭೂವುಃ ಕವಯಸ್ತಸ್ಯ ವಾಮನಾದ್ಯಾಶ್ಚ ಮಂತ್ರಿಣಃ ॥
(ರಾಜತರಂಗಿಣೀ)

ಉಪನಾಮವನ್ನು ಬ್ರಾಹ್ಮಣರು ಧರಿಸಲಾರರು ಎಂಬ ಸಂದೇಹಕ್ಕೂ ಅವಕಾಶವಿಲ್ಲ. ಏಕೆಂದರೆ ಉತ್ತರ ಭಾರತದಲ್ಲಿ ತತ್ರಾಪಿ ವಂಗದೇಶದ ಅನೇಕ ಬ್ರಾಹ್ಮಣರು 'ಸಿಂಹ' ಎಂಬ ಉಪನಾಮವನ್ನು ಧರಿಸಿರುವ ಉದಾಹರಣೆಗಳುಂಟು.[೫] ಈ ಕಾರಣಗಳಿಂದ ಕವಿಯು ಪ್ರಾಯಃ ಔತ್ತರೇಯನಿರಬಹುದು. ಹಾಗಿದ್ದಪಕ್ಷದಲ್ಲಿ ಕವಿ 'ಸಿಂಹ' ಎಂಬ ಸರಳವಾದ ಪದವನ್ನು ಬಿಟ್ಟು 'ಮೃಗರಾಜ'ನೆಂದು ಹೇಳಿಕೊಳ್ಳುವ ಔಚಿತ್ಯವೇನೋ ತಿಳಿಯದು!

ಕವಿಯ ಮತದ ವಿಷಯದಲ್ಲಿಯೂ ಭಿನ್ನಾಭಿಪ್ರಾಯಗಳಿಲ್ಲದಿಲ್ಲ. ಏಕೆಂದರೆ ಕೆಲವರು ಈತ ಪಾಂಚರಾತ್ರ ವೈಷ್ಣವ ಮತಾನುಯಾಯಿ ಎಂದು ಊಹಿಸುತ್ತಾರೆ. ಆದರೆ ಇದಕ್ಕೆ ತಕ್ಕ ಸಮರ್ಥನೆ ದೊರೆತಿಲ್ಲ. ಏಕೆಂದರೆ ನಾಟಕದ ಪ್ರಾರಂಭದಲ್ಲಿ ಬರುವ ನಾಂದಿ ಮೊದಲ ಪದ್ಯದಲ್ಲಿ 'ಹರಿಚರಣಯೋರಂಜಲಿರಯಂ' ಎಂದು ಹರಿಸ್ಮರಣಮಾಡಿರುವಂತೆಯೇ ಮೂರನೆಯ ಪದ್ಯದಲ್ಲಿ 'ಧೂರ್ಜಟಿಃ ಪಾತು ಯುಷ್ಮಾನ್' ಎಂದು ಹರನನ್ನೂ ನೆನೆಯಲಾಗಿದೆ. ಮೇಲಾಗಿ ಮೊದಲ ಅಂಕದಲ್ಲಿ ಭೀಮ ಶ್ರೀಕೃಷ್ಣನ ಬಗೆಗೆ ಹೇಳುವಾಗ ಶ್ರೀಕೃಷ್ಣ 'ಯೋಗಿಜನ ಹೃದಯಗಮ್ಯ, ಪರಂಜ್ಯೋತಿಸ್ಸ್ವರೂಪ, ಸಾಕ್ಷಾತ್ ಪರಬ್ರಹ್ಮ' (೧-೨೩) ಎಂದು ವರ್ಣಿಸಿರುವುದಲ್ಲದೆ ನಾಟಕದ ಕಡೆಯಲ್ಲಿ

---

೫. ಸೀತಾರಾಮಶಾಸ್ತ್ರೀ, ಎಂ.ಎ., ವೇಣೀಸಂಹಾರ ನಾಟಕ ಪ್ರತಿಕೃತಿ, ಮುನ್ನುಡಿ ಪು. ೨೮.

ಬರುವ ಭರತವಚನದಲ್ಲಿ 'ಭವತು ಭಗವನ್‌ಭಕ್ತಿಃ ದ್ವೈತಂ ವಿನಾ ಪುರುಷೋತ್ತಮೇ' ಎಂದು ಹೇಳಿರುವುದರಿಂದ ಭಟ್ಟನಾರಾಯಣ ಹರಿಹರರಲ್ಲಿ ಭಕ್ತಿಭಾವವುಳ್ಳ ಸ್ಮಾರ್ತಾದ್ವೈತಿ ಯೆಂದು ವ್ಯಕ್ತವಾಗುತ್ತದೆ.

೩. ಕಥಾಸಂಗ್ರಹ

ಅಜ್ಞಾತವಾಸವನ್ನು ಪೂರ್ಣಗೊಳಿಸಿದ ಯುಧಿಷ್ಠಿರ ಶ್ರೀಕೃಷ್ಣನನ್ನು ಸಂಧಿಗಾಗಿ ದುರ್ಯೋಧನನ ಬಳಿಗೆ ಕಳುಹಿಸು ತ್ತಾನೆ. 'ಸಂಧಿ' ಎಂಬ ಸುದ್ದಿ ಕೇಳಿ ಕಿಡಿಕಿಡಿಯಾದ ಭೀಮ ಸಹದೇವನೊಡನೆ ಪ್ರವೇಶಿಸುತ್ತಾನೆ. ಸಂಧಿ ಭೀಮನಿಗೆ ಹಿಡಿಸದು. ಅದಕ್ಕಾಗಿ ಆವೇಶಗೊಂಡ ಅವನು ಆಯುಧಾಗಾರ ವನ್ನು ಪ್ರವೇಶಿಸುವೆನೆಂದು ಹೊರಟು ಪಾಂಚಾಲಿಯ ಸದನ ವನ್ನು ಹೊಗುವನು. ಅಷ್ಟರಲ್ಲಿ ದ್ರೌಪದಿ ಪ್ರವೇಶಿಸಿ ಭಾನುಮತಿ ತನ್ನನ್ನು ಕುರಿತು 'ನಿನ್ನ ಬಿಡುಜಡೆಯನ್ನು ಏಕೆ ಕಟ್ಟು ವುದಿಲ್ಲ?' ಎಂದು ಕಟಕಿಯಾಡಿದಳೆಂದು ದುಃಖಿಸುವಳು. ಇದರಿಂದ ಮೊದಲೇ ಹೊಗೆಯಾಡುತ್ತಿದ್ದ ಭೀಮನ ಕೋಪ ಉರಿದೇಳುವುದು. ಅಷ್ಟರಲ್ಲಿ 'ಸಂಧಿ ಮುರಿದುಬಿದ್ದಿತು, ಯುಧಿಷ್ಠಿರ ಯುದ್ಧವನ್ನು ಘೋಷಿಸಿದ' ಎಂಬ ಸುದ್ದಿ ಬರುವುದು. (೧)

ಕಂಚುಕಿ ಪ್ರವೇಶಿಸಿ 'ಭೀಷ್ಮರು ಶರತಲ್ಪ ಹಿಡಿದರು. ಅಭಿಮನ್ಯು ಮಡಿದ' ನೆಂದು ಸೂಚಿಸುವನು.

(ವಿಷ್ಕಂಭಕ)

ಭಾನುಮತಿ ದುರ್ಯೋಧನನ ಮಡದಿ. ಅವಳು ಮುಂಜಾನೆ ಎದ್ದು ಉಪವನಕ್ಕೆ ಬರುವಳು; ಮತ್ತು ತಾನು ಇರುಳು ಕಂಡ ದುಃಸ್ವಪ್ನವೃತ್ತಾಂತವನ್ನು ಚೇಟಿಯೊಡನೆ ಹೇಳುತ್ತಿರುವಳು: 'ನಕುಲಹತವಾದ ನೂರು ಸರ್ಪಗಳನ್ನು ಪ್ರಮದವನದಲ್ಲಿ ಕಂಡೆನು' ಎಂದ ಅವಳು ಮರೆತು ಹೋದ ಕನಸಿನ ಕತೆಯನ್ನು ನೆನಪುಮಾಡಿಕೊಳ್ಳುತ್ತಿರುವಾಗ ದುರ್ಯೋಧನ ಪ್ರವೇಶಿಸಿ ಮರೆಯಲ್ಲಿ ನಿಂತು ಮಡದಿಯ ಮಾತನ್ನು ಆಲಿಸುವನು. ಮಡದಿ ಕನಸಿನ ಕತೆ ಹೇಳುತ್ತಿರುವುದನ್ನು ಅವನು ಅರಿಯ. ರಾಣಿ ನೆನಪುಮಾಡಿಕೊಂಡು ಕತೆ ಮುಂದು ವರಿಸುವಳು: 'ಅಷ್ಟರಲ್ಲಿ ಅತಿಶಯ ದಿವ್ಯರೂಪವುಳ್ಳ ನಕುಲ ಸೌಂದರ್ಯವನ್ನು ಕಂಡು ಉತ್ಸುಕಳಾದೆನು. ಮತ್ತು ಲತಾ ಮಂಟಪವನ್ನು ಪ್ರವೇಶಿಸಿದೆನು.' ಮುಂತಾದ ಅವಳ ಮಾತು ಗಳು ದುರ್ಯೋಧನನಿಗೆ ಮಡದಿಯ ಶೀಲದ ವಿಷಯದಲ್ಲಿ ಸಂದೇಹ ಮೂಡಿಸಿದವು. ಭಾನುಮತಿ ಪಾಂಡವರಲ್ಲಿ ಒಬ್ಬನಾದ ನಕುಲನಲ್ಲಿ ಅನುರಕ್ತಳಾಗಿರುವಳೆಂದು ಊಹಿಸಿ ಅವನು ವ್ಯಗ್ರ ನಾಗುವನು, 'ಅಷ್ಟರಲ್ಲಿ ಆರ್ಯಪುತ್ರನ ಪ್ರಭಾತಮಂಗಲ ತೂರ್ಯಾದಿಗಳಿಂದ ಎಚ್ಚೆತ್ತೆನು' ಎಂದು ಮುಗಿಸುವಳು ಇದು ಸ್ವಪ್ನವೃತ್ತವೆಂದು ಅರಿತ ಅವನು ತಾನು ದುಡುಕಿದೆನೆಂದು ವಿಷಾದಿಸುವನು. ಅವಳಲ್ಲಿ ಮೊದಲೇ ಅನುರಕ್ತನಾಗಿದ್ದ ಅವನಿಗೆ ಈಗ ವಿಶೇಷ ಅನುರಾಗ ಮೂಡಿತು. ದುಃಸ್ವಪ್ನ ದೋಷನಿವಾರಣೆ ಗಾಗಿ ಅವಳು ಕೈಗೊಂಡಿರುವ ವ್ರತದಲ್ಲಿ ಅವನಿಗೆ ಅನಾದರ! ಚೇಟಿ ವ್ರತದ ಪೂಜೆಗಾಗಿ ತಂದಿದ್ದ ಪೂಜಾ ಸಾಮಗ್ರಿಯ

ತಟ್ಟೆಯನ್ನು ಕಸಿದುಕೊಂಡ ಅವನು ತಾನೇ ಮಡದಿಗೆ ಹಿಂದಿನಿಂದ ಕೊಡಹೋಗುವನು. ಮಡದಿಯು ಕೈಸೋಂಕಿನಿಂದ ಅದುರಿದ ರಾಜನ ಕೈಯಿಂದ ತಟ್ಟೆ ಕೆಳಗೆ ಬಿದ್ದು ವ್ರತ ಭಂಗವಾಗುವುದು. ಅಷ್ಟರಲ್ಲಿ ಆಕಸ್ಮಿಕವಾಗಿ ಎದ್ದ ಚಂಡ ಮಾರುತದಿಂದ ಅವನ ತೇರಿನ ಬಾವುಟ ಮುರಿದು ಬೀಳುವುದು. ಈ ಮಧ್ಯೆ ಜಯದ್ರಥನ ತಾಯಿ ಮತ್ತು ಹೆಂಡತಿಯರು ಅಲ್ಲಿಗೆ ಬಂದು ಪಾರ್ಥ ನಾಳೆ ಸಂಜೆಯೊಳಗೆ ಜಯದ್ರಥನ ತಲೆ ತೆಗೆಯುವುದಾಗಿ ಮಾಡಿರುವ ಪ್ರತಿಜ್ಞೆ ತಿಳಿಸುವರು. ಅವರನ್ನು ಸಮಾಧಾನಪಡಿಸಿ ಸುಯೋಧನ ಅರ್ಜುನನ ಪ್ರತಿಜ್ಞೆಯನ್ನು ಅಲ್ಲಗಳೆದು ಯುದ್ಧಕ್ಕೆ ಉದ್ಯುಕ್ತನಾಗುವನು. ಭಾನುಮತಿ ಸೂಚಿಸಿದ ಸೂಕ್ತ ಸಂದೇಹವನ್ನೂ ಅವನು ಲೆಕ್ಕಿಸದೆ ರಣಾಭಿಮುಖಿಯಾಗುವನು. (೨)

ರಾಕ್ಷಸ ರಾಕ್ಷಸಿಯರ ಸಲ್ಲಾಪದಲ್ಲಿ ಘಟೋತ್ಕಚ ಮೊದಲಾದ ವೀರರ ಮರಣ ಸೂಚಿತವಾಗುವುದು.

(ಪ್ರವೇಶಕ)

ದ್ರೋಣನ ದುರ್ಮರಣವಾರ್ತೆಯನ್ನು ಕೇಳಿ ಕೃದ್ಧನಾದ ಅಶ್ವತ್ಥಾಮ ಕೃಪಾಚಾರ್ಯನಲ್ಲಿಗೆ ಬಂದು ಪಾಂಡವರನ್ನು ನಿರ್ಮೂಲ ಮಾಡುವುದಾಗಿ ವಿಜೃಂಭಿಸುವನು. ಕೃಪಾಚಾರ್ಯ ಅವನ ಉತ್ಸಾಹವನ್ನು ಕಂಡು ಸೇನಾಪತಿಯ ಸ್ಥಾನದಲ್ಲಿ ಅವನನ್ನು ನೇಮಿಸಬೇಕೆಂದು ಯೋಚಿಸಿ, ಅಶ್ವತ್ಥಾಮನೊಡನೆ ದುರ್ಯೋಧನನಲ್ಲಿಗೆ ಬರುವನು. ಕುಟಿಲಮತಿ ಕರ್ಣ

ದ್ರೋಣನ ವಿಷಯದಲ್ಲಿ ದುರ್ಬೋಧೆಮಾಡಿದ್ದುದರಿಂದ ಸುಯೋಧನನು ಅಶ್ವತ್ಥಾಮನ ಬಗೆಗೆ ಅನ್ಯಥಾ ಭಾವನೆ ಹೊಂದಿರುವನು. ಆದ್ದರಿಂದ 'ಅಶ್ವತ್ಥಾಮನನ್ನು ಸೇನಾಪತಿಯನ್ನಾಗಿ ಮಾಡಬೇಕೆ'ಂಬ ಕೃಪನ ಸಲಹೆ ಬಿದ್ದುಹೋಗುವುದು. ದುರ್ಯೋಧನ ಸೇನಾಧಿಪತ್ಯವನ್ನು ಕರ್ಣನಿಗೆ ಕೊಡುವುದಾಗಿ ಮೊದಲೇ ನಿರ್ಧರಿಸಿದ್ದುದಾಗಿ ತಿಳಿಸುವನು. ಅಷ್ಟರಲ್ಲಿ ಕರ್ಣ ಮತ್ತು ಅಶ್ವತ್ಥಾಮರಿಗೆ ಕಲಹವೇರ್ಪಟ್ಟು 'ಕರ್ಣ ಸಾಯುವವರೆಗೆ ತಾನು ಆಯುಧ ಹಿಡಿಯುವುದಿಲ್ಲ' ವೆಂದು ಅಶ್ವತ್ಥಾಮನು ಪ್ರತಿಜ್ಞೆಮಾಡಿ ಖಡ್ಗವನ್ನು ಬಿಸುಡುವನು. ಅಷ್ಟರಲ್ಲಿ ದುಶ್ಶಾಸನನ ರಕ್ತವನ್ನು ಹೀರುವೆನೆಂಬ ಭೀಮನ ಗರ್ಜನೆ ಕೇಳಿಸುವುದು. ಕರ್ಣ ಮತ್ತು ದುರ್ಯೋಧನರು ಅವನ ರಕ್ಷಣೆಗಾಗಿ ನಿರ್ಗಮಿಸುವರು. ಅಶ್ವತ್ಥಾಮ-ಕೃಪರು ನಿರುಪಾಯರಾಗಿ ಹಿಂದಿರುಗುವರು. (೩)

ರಣರಂಗದಲ್ಲಿ ಪ್ರಹಾರಮೂರ್ಛಿತನಾಗಿ ಬಿದ್ದಿದ್ದ ದುರ್ಯೋಧನನ ರಥವನ್ನು ಸಾರಥಿ ಬೇರೆ ಕಡೆಗೆ ಒಯ್ಯುವನು. ಎಚ್ಚೆತ್ತ ಸುಯೋಧನ ದುಶ್ಶಾಸನನ ರಕ್ಷಣೆಗಾಗಿ ಆತುರಪಡುತ್ತಿರುವಾಗ ದುಶ್ಶಾಸನನ ಮರಣದ ಸುದ್ದಿ ಬರುವುದು.

ರಣರಂಗದಿಂದ ಬಂದ ಸುಂದರಕನೆಂಬ ಚಾರನು ದುರ್ಯೋಧನನಿಗೆ ಕಾಳಗದಲ್ಲಿ ನಡೆದ ಭೀಮ-ಕರ್ಣರ ಯುದ್ಧ, ಅರ್ಜುನನೊಡನೆ ಹೋರಾಡುತ್ತಿದ್ದ ಕರ್ಣಪುತ್ರ ವೃಷಸೇನನ ಕಥೆಗಳನ್ನು ವರ್ಣಿಸುವನು. ಯುದ್ಧದಲ್ಲಿ ವಿರಥನಾದ ಕರ್ಣ

ಬೇರೆ ರಥ ಹತ್ತಿ ಯುದ್ಧಕ್ಕೆ ತೆರಳುವಾಗ ದುರ್ಯೋಧನನಿಗೆ ಕಳುಹಿಸಿದ್ದ ಲಿಖಿತ ಸಂದೇಶವನ್ನು ತಂದುಕೊಡುವನು. ಕರ್ಣಾರ್ಜುನರ ಸಮರವರ್ಣನವನ್ನು ಸುಯೋಧನ ಓದುತ್ತಿರುವಷ್ಟರಲ್ಲಿ ಗಾಂಧಾರೀಧೃತರಾಷ್ಟ್ರರು ಅಲ್ಲಿಗೆ ಬರುವರು. (೪)

ರಣರಂಗದಲ್ಲಿ ಸಂಧಿಸಿದ ಗಾಂಧಾರೀಧೃತರಾಷ್ಟ್ರರು ದುರ್ಯೋಧನನಿಗೆ, ಪಾಂಡವರೊಡನೆ ಸಂಧಿಮಾಡಿಕೊಳ್ಳಲು ಸಲಹೆ ಮಾಡುವರು. ದುರ್ಯೋಧನ ಅದನ್ನು ತಿರಸ್ಕರಿಸುವನು. ಅಷ್ಟರಲ್ಲಿ ಕರ್ಣವಧೆಯ ಸುದ್ದಿ ಬರುವುದು. ಆಗಲೂ 'ಅಶ್ವತ್ಥಾಮನನ್ನು ಸೇನಾಧಿಪತಿಯನ್ನಾಗಿ ಮಾಡು' ಎಂಬ ತಂದೆಯ ಮಾತನ್ನು ದುರ್ಯೋಧನ ಅಲ್ಲಗಳೆದು, ತಾನೇ ಸೇನಾಧಿಪತಿಯಾಗಿ ಹೋರಾಡಲು ನಿರ್ಧರಿಸುವನು. ಅಷ್ಟರಲ್ಲಿ ಭೀಮಾರ್ಜುನರು ಅಲ್ಲಿಗೆ ಬರುವರು. ಭೀಮ 'ನಾಳೆ ಸಂಜೆಯೊಳಗಾಗಿ ದುರ್ಯೋಧನನನ್ನು ಕೊಲ್ಲು'ವುದಾಗಿ ಪ್ರತಿಜ್ಞೆ ಮಾಡಿ ಹಿಂದಿರುಗುವನು. (೫)

ಪಾಂಚಾಲಕನೆಂಬ ದೂತ ದ್ರೌಪದೀಸಮೇತನಾಗಿದ್ದ ಯುಧಿಷ್ಠಿರನಲ್ಲಿಗೆ ಬಂದು ಯುದ್ಧಭೂಮಿಯ ಸುದ್ದಿಯನ್ನು ಬಿತ್ತರಿಸುವನು. 'ವೈಶಂಪಾಯನ ಸರೋವರದಲ್ಲಿ ಅವಿತುಕೊಂಡಿದ್ದ ದುರ್ಯೋಧನನ ವಿಷಯವನ್ನು ವನಚರನಿಂದ ತಿಳಿದ ಶ್ರೀಕೃಷ್ಣ ಮತ್ತು ಭೀಮಾರ್ಜುನರು ಅಲ್ಲಿಗೆ ಬರುವರು. ಅಲ್ಲಿ ಅವರು ಕೊಳದೊಳಕ್ಕೆ ಹೋದ ದುರ್ಯೋಧನನ ಹೆಜ್ಜೆ ಗುರುತುಗಳನ್ನು ಗುರುತಿಸುವರು. ಭೀಮ ದುರ್ಯೋಧನನ

ಅಕೃತ್ಯಗಳನ್ನು ಬಣ್ಣಿಸಿ ಗರ್ಜಿಸುವನು. ಅವುಗಳನ್ನು ಕೇಳಿ ತಡೆಯಲಾರದೆ ದುರ್ಯೋಧನ ಕೊಳದಿಂದ ಹೊರಬರುವನು. ಭೀಮ ಮತ್ತು ದುರ್ಯೋಧನರಿಗೆ ಯುದ್ಧ ಆರಂಭವಾಯಿತು. ಎಂದು ಪಾಂಚಾಲಿಕ ಹೇಳುವನು. ಅಷ್ಟರಲ್ಲಿ ದುರ್ಯೋಧನನ ಮಿತ್ರ ಚಾರ್ವಾಕ ಯುಧಿಷ್ಠಿರನನ್ನು ವಂಚಿಸಬಯಸಿ ಮುನಿ ವೇಷದಿಂದ ಅಲ್ಲಿಗೆ ಬರುವನು. ಅವನು ಭೀಮ-ದುರ್ಯೋಧನರ ಯುದ್ಧ ವರ್ಣನೆಯನ್ನು ಮುಂದುವರಿಸುವನು. 'ಈ ಯುದ್ಧದಲ್ಲಿ ಭೀಮ ದುರ್ಯೋಧನನಿಂದ ಮಡಿದನು. ಇಷ್ಟು ಹೊತ್ತಿಗೆ ಅರ್ಜುನನ ಕತೆಯೂ ಮುಗಿದಿರಬೇಕು' ಎಂದು ಹೇಳುವನು.

ಇದನ್ನು ಕೇಳಿದ ಯುಧಿಷ್ಠಿರ ದುಃಖಾರ್ತನಾಗಿ ಚಿತೆ ಏರ್ಪಡಿಸಿ, ಭೀಮನಿಗೆ ಜಲಾಂಜಲಿಯನ್ನಿತ್ತು ವಿಜಯಿಯಾಗಿ ದುರ್ಯೋಧನ ಬರುವುದರೊಳಗಾಗಿ ದ್ರೌಪದಿಯೊಡನೆ ಅಗ್ನಿ ಪ್ರವೇಶಮಾಡಲು ಉದ್ಯುಕ್ತನಾಗುವನು. ಅಷ್ಟರಲ್ಲಿ ರಕ್ತ ಸಿಕ್ತಾಂಗನಾದ ಭೀಮ ಪ್ರವೇಶಿಸುವನು. ದುಃಖಸಂತಪ್ತನಾದ ಯುಧಿಷ್ಠಿರನ ಕಣ್ಣುಗಳಲ್ಲಿ ನೀರು ತುಂಬಿದ್ದುದರಿಂದ ಅವನನ್ನು ಭೀಮನೆಂದು ಗುರ್ತಿಸದೆ, ದುರ್ಯೋಧನನೆಂದು ಬಗೆದು ಕ್ರೋಧದಿಂದ ಬಿಗಿದಪ್ಪುವನು. ವಿಸ್ಮಿತನಾದ ಭೀಮ ತಾನೇ ಭೀಮನೆಂದೂ, ಯುದ್ಧದಲ್ಲಿ ದುರ್ಯೋಧನ ಊರುಭಂಗವಾಗಿ ಮಡಿದನೆಂದು ನಿವೇದಿಸುವನು. ದ್ರೌಪದಿಯ ವೇಣೀಸಂಹಾರ ಮತ್ತು ಯುಧಿಷ್ಠಿರ ಪಟ್ಟಾಭಿಷೇಕಗಳು ಜರುಗುವುವು.

೪. ಪಾತ್ರಚಿತ್ರಣ

ನಾಟಕದಲ್ಲಿ ಯುಧಿಷ್ಠಿರ, ಭೀಮ, ದ್ರೌಪದಿ, ದುರ್ಯೋಧನ, ಭಾನುಮತಿ, ಕರ್ಣ, ಅಶ್ವತ್ಥಾಮರು ಪ್ರಧಾನವಾಗಿ ಚಿತ್ರಿತರಾಗಿದ್ದಾರೆ. ಧೃತರಾಷ್ಟ್ರ, ಗಾಂಧಾರಿ, ಸಹದೇವ, ಅರ್ಜುನ, ಕೃಪ ಮುಂತಾದವರು ಅಪ್ರಧಾನ.

೧) **ಯುಧಿಷ್ಠಿರ:** ನಾಟಕದಲ್ಲಿ ವೀರರಸವೇ ಪ್ರಧಾನ, ಅದಕ್ಕೆ ಯುಧಿಷ್ಠಿರನ ಉತ್ಸಾಹ ಸ್ಥಾಯಿಭಾವ, ದುರ್ಯೋಧನ ಆಲಂಬನವಿಭಾವ. ಸಾಂಪ್ರದಾಯಿಕ ದೃಷ್ಟಿಗೆ ನಾಯಕ ಯುಧಿಷ್ಠಿರ. ಅವನ ಉತ್ಸಾಹವು ದುರ್ಯೋಧನನನ್ನು ಅವಲಂಬಿಸಿ, ಅವನು ಎಸಗಿದ ಅಪಕೃತಿಗಳಿಂದ ಉದ್ದೀಪಿತವಾಗಿ, ಧೈರ್ಯ, ಸ್ಥೈರ್ಯ ಮುಂತಾದವುಗಳಿಂದ ಪರಿಪುಷ್ಟವಾಗಿ ನಾಟಕವನ್ನು ನೋಡುತ್ತಿರುವ ಅಥವಾ ಓದುತ್ತಿರುವ ಸಾಮಾಜಿಕರಲ್ಲಿ ವೀರರಸವಾಗಿ ಅಭಿವ್ಯಕ್ತವಾಗುತ್ತದೆ.

ಯುದ್ಧ ಪ್ರಧಾನವಾದ ಈ ನಾಟಕದ ನಾಯಕ ಯುಧಿಷ್ಠಿರ ಯುದ್ಧವೀರನೆಂಬುದು ಲಾಕ್ಷಣಿಕರ ಮತ. ಆದರೆ ಇಲ್ಲಿ ಯುಧಿಷ್ಠಿರ ಕಾಣಿಸಿಕೊಳ್ಳುವುದು ನಾಟಕದ ಕಡೆಯಲ್ಲಿ. ಇಡಿಯ ನಾಟಕದಲ್ಲೆಲ್ಲಿಯೂ ಅವನು ಧನುಸ್ಸು ಹಿಡಿದು ಯುದ್ಧ ಮಾಡಿಲ್ಲ. ಭೀಮನು ದುರ್ಯೋಧನನನ್ನು ಕೊಂದು ರಕ್ತಸಿಕ್ತಾಂಗನಾಗಿ ಬಂದಾಗ ಅವನನ್ನು ಚಾರ್ವಾಕನ ಮಾತಿನಂತೆ ದುರ್ಯೋಧನನೆಂದು ತಪ್ಪಾಗಿ ತಿಳಿದು ಗಾಬರಿಯಿಂದ

ಕಃ ಕೋऽತ್ರ ಭೋಃ! ಸನಿಷಂಗಂ ಮೇ ಧನುರುಪನಯ ದುರಾತ್ಮನ್, ದುರ್ಯೋಧನ ಹತಕ! ಆಗಚ್ಛಾಗಚ್ಛ! ಅಪನಯಾಮಿ ತೇ ಗದಾಕೌಶಲಸಂಭೃತಂ ಭುಜದರ್ಪಂ ಶಿಲೀಮುಖಸಾರೇಣ.

ಎಂದು ಪಾಂಚಾಲಿಯನ್ನು ಅರಸಿ ಬಂದ ಭೀಮನನ್ನು ಬಾಹುಗಳಿಂದ ಬಿಗಿದಪ್ಪುತ್ತಾನೆ. ಇದಿಷ್ಟೆ ಯುಧಿಷ್ಠಿರನ ಪೌರುಷಪ್ರದರ್ಶನ. ಇಷ್ಟರಿಂದಲೇ ಯುಧಿಷ್ಠಿರನನ್ನು ನಾಯಕನನ್ನಾಗಿ ಮಾಡಲು ಇಷ್ಟವಿಲ್ಲದ ಕನ್ನಡ ಕವಿಶ್ರೇಷ್ಠರಾದ ಪಂಪ, ರನ್ನರು ತಮ್ಮ ಕೃತಿಗಳಲ್ಲಿ ಕ್ರಮವಾಗಿ ತಮಗೆ ಆಶ್ರಯ ದಾತರೆನಿಸಿದ ಚಾಳುಕ್ಯ ವಂಶದ ಎರಡನೆಯ ಅರಿಕೇಸರಿಯನ್ನು ಅರ್ಜುನನಿಗೂ, ಚಾಳುಕ್ಯಚಕ್ರವರ್ತಿ ಆಹವಮಲ್ಲನ ಕುಮಾರ ಇರಿವಬೆಡಂಗನನ್ನು ಭೀಮನಿಗೂ ಅಭೇದಮಾಡಿ ಕಥಾನಾಯಕ ರನ್ನಾಗಿ ಮಾಡಿಕೊಂಡು ತಮ್ಮ 'ವಿಕ್ರಮಾರ್ಜುನ ವಿಜಯ' ಮತ್ತು 'ಗದಾಯುದ್ಧ' ಮಹಾಕಾವ್ಯಗಳನ್ನು ಬರೆದು ಬೆಳಗಿದರು.

ಪ್ರಕೃತ ವೇಣೀಸಂಹಾರದಲ್ಲಿ ಯುಧಿಷ್ಠಿರ ನಾಯಕ. ಆತನಲ್ಲಿ ಕ್ಷಮೆ, ಗಾಂಭೀರ್ಯ, ಮಹಾಸತ್ವ, ಸ್ಥಿರಬುದ್ಧಿ ಮತ್ತು ಆತ್ಮಶ್ಲಾಘನವಿಲ್ಲದಿರುವಿಕೆ ಮುಂತಾದ ಉದಾತ್ತ ಗುಣ ಗಳಿವೆ. ಭೀಮವಿಜಯದ ಫಲ ಯುಧಿಷ್ಠಿರನ ಪಟ್ಟಾಭಿಷೇಕದಲ್ಲಿ ಪರ್ಯವಸಾನವಷ್ಟೆ!

೨) **ಭೀಮ:** ಆಧುನಿಕ ವಿಮರ್ಶಕರ ದೃಷ್ಟಿಯಿಂದ ಇಲ್ಲಿ ನಾಯಕ ಭೀಮ. ನಾಟಕದಲ್ಲಿ ಪ್ರಧಾನವಾಗಿ ಎದ್ದು ಕಾಣು

ವುದು ರೌದ್ರರಸ. ಇದಕ್ಕೆ ಬಲಿಷ್ಠನೂ, ಪ್ರಭಾವಶಾಲಿಯೂ, ಶತ್ರುಸೂದನನೂ ಆದ ಭೀಮನಲ್ಲಿರುವ ಕ್ರೋಧ ಸ್ಥಾಯಿಭಾವ, ಅದು ಪ್ರತಿನಾಯಕ ದುರ್ಯೋಧನ, ಮತ್ತು ಅವನೆಸಗಿದ ಅಕ್ಷಮ್ಯ ಅಪರಾಧಗಳನ್ನು ಅವಲಂಬಿಸಿ ಭಾನುಮತಿಯಿಂದ ಹೀಯಾಳಿಸಲ್ಪಟ್ಟ ಪಾಂಚಾಲಿಯ ನಿಟ್ಟುಸಿರಿನಿಂದ ಉದ್ದೀಪಿತ ವಾಗಿ, ದುಶ್ಶಾಸನ ದುರ್ಯೋಧನಾದಿಗಳ ವಧೆಯಲ್ಲಿ ಪರ್ಯವ ಸಾನಗೊಂಡು, ಅದನ್ನು ಅನುಲಕ್ಷಿಸುವ ಸಾಮಾಜಿಕರಲ್ಲಿ ರೌದ್ರ ರಸವಾಗಿ ಅಭಿವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಇಲ್ಲಿ ಭೀಮ ಧೀರೋದ್ಧತ ನಾಯಕ.

ಭೀಮನಿಗೆ ಅಣ್ಣನಲ್ಲಿದ್ದ ಗೌರವ, ಸಹೋದರರಲ್ಲಿನ ವಾತ್ಸಲ್ಯ, ದ್ರೌಪದಿಯಲ್ಲಿನ ಮಮತೆ, ಭಗವಂತ ಶ್ರೀಕೃಷ್ಣನಲ್ಲಿನ ಭಕ್ತಿಗಳು ಅನುಕರಣೀಯ. ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಉದಾತ್ತ ರಾಜವಂಶಕ್ಕೆ ಮಾತ್ರವಲ್ಲದೆ ಇಡಿಯ ಮಾನ ವೀಯತೆಗೇ ಕಳಂಕವನ್ನು ತಂದಿದ್ದ ದ್ರೌಪದಿಯ ಮಾನಭಂಗ ಪ್ರಸಂಗ ಮಾತ್ರವಲ್ಲ ; ರಾಜಸಭೆಯಲ್ಲಿ ಒಬ್ಬ ಪ್ರತಿಷ್ಠಿತ ಮಹಿಳೆಗೆ ಎಸಗಿದ ಅಮಾನುಷ ಪ್ರಸಂಗವನ್ನು ಎದುರಿಸಿದ ಅಪ್ರತಿಮ ಕ್ಷತ್ರಿಯ ಅಥವಾ ಮಾನವತ್ವದ ಸ್ವಾಭಿಮಾನದ ಮೂರ್ತಿಮತ್ ಸ್ವರೂಪ ಭೀಮ. ಮಹಾಭಾರತಕ್ಕೆ, ಭಾರತೀಯ ಸಭ್ಯತೆಯ ಪ್ರತಿಷ್ಠೆ ಒದಗಿರುವುದು ಧರ್ಮಜನಿಂದ ಒಂದು ಪಾದ (ನಾಲ್ಕನೇ ಒಂದು ಭಾಗ) ವಾದರೆ ಭೀಮನಿಂದ ಸಂದುದು ಮುಪ್ಪಾಗ.

ಬಾಲ್ಯದಿಂದಲೇ ಭೀಮನಿಗೆ ಕೌರವರಲ್ಲಿ ದ್ವೇಷ ಬೆಳೆಯಲು ಸುಯೋಧನಾದಿಗಳು ಅಸೂಯೆಯಿಂದ ಮೇಲಿಂದ ಮೇಲೆ ಅವನಿಗೆ ಎಸಗಿದ ಮಹಾಪರಾಧಗಳೇ ಕಾರಣ. ಅವುಗಳನ್ನು ಭೀಮ ದುರ್ಯೋಧನನ ವಿಷಯ ಬಂದಾಗಲೆಲ್ಲ ಮತ್ತೆ ಮತ್ತೆ ಉಲ್ಲೇಖಿಸುತ್ತಾನೆ.

> **ಲಾಕ್ಷಾಗೃಹಾನಲ ವಿಷಾನ್ನಸಭಾಪ್ರವೇಶೈಃ**
> **ಪ್ರಾಣೇಷು ವಿತ್ತನಿಚಯೇಷು ಚ ನಃ ಪ್ರಹೃತ್ಯ ।**
> **ಆಕೃಷ್ಯ ಪಾಂಡವವಧೂಪರಿಧಾನಕೇಶಾನ್.... ॥**

ಇವುಗಳಲ್ಲಿ ಅರಗಿನ ಮನೆ ಸುಟ್ಟದ್ದು, ವಿಷದ ಆಹಾರ ಕೊಟ್ಟದ್ದು, ಕಪಟಜೂಜು, ದ್ರೌಪದಿಯ ಮುಡಿ ಹಿಡಿದೆಳೆದು ಉಡಿಸೆಳೆದದ್ದು ಮುಂತಾದವು ಮುಖ್ಯವಾದವು. ಮಹಾ ಭಾರತದ ವೀರಕಥೆ ಸಮಾಪ್ತವಾದುದು ಭೀಮನಿಂದಲೆ! 'ಗಂಡಿನೊಳ್ ಭೀಮಸೇನಂ' ಎಂಬ ಪಂಪನ ಪ್ರಶಸ್ತಿ ಭೀಮ ನಿಗೆ ಸಂದುದು ಉಚಿತವೇ. ಇಷ್ಟಾದರೂ ಭೀಮನ ಔದ್ಧತ್ಯ ಮೇರೆ ಮೀರಿದುದೂ ಉಂಟು. ಅದು ಅಣ್ಣ ಯುಧಿಷ್ಠಿರನನ್ನೂ ಸಹ ಬಿಟ್ಟಿಲ್ಲ. ಧರ್ಮಜನು ಸಂಧಿಗಾಗಿ ದುರ್ಯೋಧನನಲ್ಲಿಗೆ ಶ್ರೀಕೃಷ್ಣನನ್ನು ಕಳುಹಿಸಿದನೆಂಬ ಸುದ್ದಿ ಕೇಳಿದಾಗ ಭೀಮ ಸಿಡಿಮಿಡಿಗೊಳ್ಳುತ್ತಾನೆ. ಸಂಕ್ರುದ್ಧನಾದ ಭೀಮನನ್ನು ಕುರಿತು ಸಹದೇವ, 'ಹೀಗೆಲ್ಲ ನೀವು ಕುಪಿತರಾದರೆ ಅಣ್ಣನ ಮನಸ್ಸಿಗೆ ನೋವಾಗುವುದು' ಎಂದಾಗ ಭೀಮ ಕೊಟ್ಟ ಉತ್ತರ ಇದಕ್ಕೆ ನಿದರ್ಶನ, 'ಹೌದೇನು! ಅಣ್ಣನಿಗೆ ನೋವು

ಎಂಬುದೂ ಉಂಟೆ? ಪಾಪ, ತುಂಬಿದ ಸಭೆಯಲ್ಲಿ ದ್ರೌಪದಿಯು ಅಂಥ ಸ್ಥಿತಿಯನ್ನು ಕಂಡಾಗ, ಕಾಡಿನಲ್ಲಿ ಬೇಡರ ಜೊತೆಗೆ ನಾರುಮಡಿಯುಟ್ಟು ನಾವೆಲ್ಲ ಬಹುಕಾಲ ಪರಿತಪಿಸುತ್ತಿದ್ದಾಗ ಮತ್ತು ವಿರಾಟನಗರಿಯಲ್ಲಿ ಅನುಚಿತಸ್ಥಿತಿಯಲ್ಲಿದ್ದಾಗ ನಮ್ಮನ್ನು ನೋಡಿ ಆಗದ ನೋವು ಈಗ ಅಣ್ಣನಿಗೆ ಕೌರವರ ಬಗೆಗೆ ಆಗುವುದಲ್ಲವೆ?' (೧-೧೧) ಎಂದು ಅವನು ಅಣಕವಾಡುತ್ತಾನೆ. ಮೇಲಾಗಿ ಅದೇ ಮಾತನ್ನು ಸಹದೇವನ ಮೂಲಕ ಅಣ್ಣನಿಗೆ ಹೇಳಿಕಳುಹಿಸುವುದಕ್ಕೂ ಅವನು ಹಿಂದುಮುಂದು ನೋಡುವುದಿಲ್ಲ.

'ಅಣ್ಣ, ಇದುವರೆಗೆ ನಿಮ್ಮ ಆಜ್ಞೆಯನ್ನು ನಾನೆಂದೂ ಮೀರಿಲ್ಲ. ಸೌಜನ್ಯಮೂರ್ತಿಗಳಾದ ನನ್ನ ಸಹೋದರರಲ್ಲಿ ನಾನು ಎಂದೂ ನಿಂದೆಗೆ ಗುರಿಯಾಗಿಲ್ಲ. ಕೋಪದಿಂದ ವಿಜೃಂಭಿಸಿ ರಕ್ತಸಿಕ್ತಗದಾದಂಡವನ್ನೆತ್ತಿ ಕುರುಧ್ವಂಸಿಯಾಗಲು ಉದ್ಯುಕ್ತನಾದ ನನಗೆ ಇದೊಂದು ದಿನ ಮಾತ್ರ ನೀನು ಅಣ್ಣನೂ ಅಲ್ಲ, ನಿನಗೆ ನಾನು ವಿಧೇಯನೂ ಅಲ್ಲ!'

'ಅದ್ಯೈಕಂ ದಿವಸಂ ಮಮಾಸಿ ನ ಗುರುರ್ನಾಹಂ ವಿಧೇಯಸ್ತವ'(೧-೨೨) ಎಂದುಬಿಡುತ್ತಾನೆ.

ಮುಂದೆ ಐದನೆಯ ಅಂಕದಲ್ಲಿ ದುಶ್ಶಾಸನವಧೆಯಿಂದ ದುಃಖಿತನಾದ ದುರ್ಯೋಧನನನ್ನು ಧೃತರಾಷ್ಟ್ರ ಸಂತೈಸುತ್ತಿರುವಾಗ ಪ್ರವೇಶಿಸಿದ ಭೀಮ ವೃದ್ಧರಾದ ಹಿರಿಯರಿಗೆ ಅಭಿವಂದಿಸುವುದನ್ನು ಮರೆಯುವುದಿಲ್ಲ. ಆದರೆ ಆ ಅಭಿವಂದನೆಯಲ್ಲಿಯೂ

ಅವನ ಔದ್ಧತ್ಯ ಮಿಣುಕದೆಯಿಲ್ಲ. ದೊಡ್ಡಪ್ಪನಿಗೆ ಭೀಮ ತನ್ನ ಪರಿಚಯ ಮಾಡಿಕೊಡುವ ಧಾಟಿಯಿದು.

'ತಾತ! ಕೌರವರೆಲ್ಲರನ್ನೂ ಸದೆಬಡಿದು, ದುಃಶಾಸನನ ರಕ್ತಪಾನದಿಂದ ಮತ್ತನಾಗಿ ದುರ್ಯೋಧನನ ಊರುಭಂಗ ಮಾಡಲಿರುವ ಭೀಮನು ಇಗೋ, ನಿನಗೆ ಶಿರಬಾಗಿ ವಂದಿಸು ವನು' (೫-೨೮) ಎಂದ ಭೀಮನ ನುಡಿಯಿಂದ ಕಿಡಿಕಿಡಿಯಾದ ಧೃತರಾಷ್ಟ್ರ ಭೀಮನಿಗೆ 'ಈ ಅಹಂಕಾರ ನಿನಗೆ ತರವಲ್ಲ' ವೆಂದ. ಅದಕ್ಕೆ ಕೊಟ್ಟ ಭೀಮನ ಉತ್ತರವಿದು—'ತಾತ, ನಿನ್ನ ಮಕ್ಕಳ ಅಕಾರ್ಯಗಳಲ್ಲೆಲ್ಲ ನೀನು ಸಾಕ್ಷಿ, ಒಟ್ಟನಲ್ಲಿ ಈ ಮಹಾಪ ರಾಧಕ್ಕೆಲ್ಲ ನೀನೇ ಹೊಣೆ' (೫-೨೯) ಎಂಬ ಅವನ ದಿಟ್ಟ ಉತ್ತರ ಕಠೋರ ಸತ್ಯವನ್ನೂ ಸಾರಿದೆ.

೩) **ದುರ್ಯೋಧನ:**—ಈ ನಾಟಕದಲ್ಲಿ ದುರ್ಯೋಧನ ಪ್ರತಿನಾಯಕ. ಅವನು ಮಾನಧನ, ಕಾರ್ಯಾಕಾರ್ಯ ವಿಚಾರಶೂನ್ಯ. ಹೆಜ್ಜೆ ಹೆಜ್ಜೆಗೂ ಪಾಂಡವರ ಮೇಲೆ ವಿಷಕಾರು ವನು. ಅವನ ಅದೂರ ದರ್ಶಿತ್ವ, ದುಡುಕು, ಸಂದೇಹಶೀಲತೆ, ಮತ್ತು ಬಾಲಿಶತ್ವಗಳಿಗೆ ನಾಟಕದ ಎರಡನೆಯ ಅಂಕದಲ್ಲಿ ತಕ್ಕ ಸನ್ನಿವೇಶಗಳನ್ನು ಕವಿ ಒದಗಿಸಿದ್ದಾನೆ.

ರಣಯಜ್ಞಜ್ವಾಲೆ ಪ್ರಜ್ವಲಿಸ ತೊಡಗಿತ್ತು. ಅದರಲ್ಲಿ ಭೀಷ್ಮ ಹತ್ತು ದಿನ ಹೋರಾಡಿ ಶರಪಂಜರ ಸೇರಿದ್ದ, ದ್ರೋಣನ ಸೇನಾಪತಿತ್ವ, ಆತ ರಚಿಸಿದ್ದ ಚಕ್ರವ್ಯೂಹವನ್ನು ಹೊಕ್ಕ ಪಾರ್ಥನ ನಚ್ಚಿನ ಕುಮಾರ ಅಭಿಮನ್ಯು ಅಸಮಾನಶೌರ್ಯ

ದಿಂದ ಕಾದಿದ. ಕೌರವ ಸೈನ್ಯ ಸಿಂಹವನ್ನೆದುರಿಸಿದ ಜಿಂಕೆಯ ಹಿಂಡಿನಂತೆ ಅವನಿಂದ ಮಡಿದು ರಾಶಿರಾಶಿಯಾಗಿ ಉರುಳಿ ಬಿತ್ತು. ಕಡೆಗೆ ಜಯದ್ರಥ ಮತ್ತು ಕರ್ಣಾದಿಗಳ ವಂಚನೆ ಯಿಂದ ಅವನು ಮಡಿದ. ಈ ಸುದ್ದಿ ಕೇಳಿದ ಸುಯೋಧನನಿಗೆ ಅಮಿತಾನಂದ!

ಇಂಥ ಪರಿಸ್ಥಿತಿಯಲ್ಲಿಯೂ ಅವನಿಗೆ ಭಾನುಮತಿ ಯೊಂದಿಗೆ ಚಲ್ಲಾಟವಾಡುವ ಚಾಪಲ್ಯ ಬೇರೆ! ಅವಳನ್ನು ಅರಸಿ ಕಂಚುಕಿಯೊಡನೆ ಉದ್ಯಾನಕ್ಕೆ ಬರುತ್ತಾನೆ.

ಭಾನುಮತಿಗೆ ರಾತ್ರೆ ಕೆಟ್ಟ ಕನಸು ಬಿದ್ದಿತ್ತು. ಅದೂ ತನ್ನ ಸ್ವಾಮಿಗೆ ಅಮಂಗಳಕರವಾದ ' ನಕುಲದರ್ಶನ '. ಅದಕ್ಕೆ ಶಾಂತಿಯೆಸಗಲು ಮುಂಜಾನೆ ಎದ್ದು ಬಾಲೋದ್ಯಾನಕ್ಕೆ ಅವಳು ಬಂದಳು. ಅಲ್ಲಿ ಸೂರ್ಯೋಪಾಸನವೆಸಗಲು ಸಖಿಯೊಡನೆ ಸಿದ್ಧತೆ ನಡೆಸಿದ್ದಳು. ಅವಳು ಸಖಿಯೊಡನೆ ಕನಸಿನ ಸುದ್ದಿ ಮಾತ ನಾಡುತ್ತಿರುವಾಗ ಮರೆಯಲ್ಲಿ ನಿಂತು ಕೇಳಿದ ಅವನಿಗೆ 'ನಕುಲ' ಶಬ್ದದಿಂದ ಸಂದೇಹ ಮೂಡುತ್ತದೆ. " ....ಅತಿ ಸುಂದರವಾದ ನಕುಲನ ದಿವ್ಯರೂಪ ನೋಡಲು ಆಸೆಯಾಯಿತು". " ನಕುಲನು ಲತಾಮಂಟಪ ಪ್ರವೇಶಿಸಿದ". " ನಾನೂ ಅವ ನನ್ನು ಹಿಂಬಾಲಿಸಿದೆ", ನಕುಲ ನನ್ನ ಮೇಲುದವನ್ನು ಸೆಳೆದ" ಮುಂತಾದ ಮಾತುಗಳು ಅವನ ಕಿವಿಗೆ ಭರ್ಜಿಯಿಂದ ತಿವಿ ದಂತಾಗುತ್ತವೆ. ಪಾಂಡವರ ಮೇಲೆ ಮೊದಲೇ ವಿಷಕಾರುತ್ತಿದ್ದ ಅವನಿಗೆ ' ನಕುಲ ' ಶಬ್ದವು ಮಾದ್ರೀಸುತ ನಕುಲನ ನೆನಪು

ಮಾಡಿಕೊಟ್ಟಿತು. ಅದು ಆಕೆಯ ಬಗ್ಗೆ ಬಗೆಬಗೆಯ ಆಪಾದನೆಗಳನ್ನೂ ಅವನಲ್ಲಿ ಮೂಡಿಸಿತು.

ಅಷ್ಟರಲ್ಲಿ ಭಾನುಮತಿ ' ಸಖಿ, ಕೂಡಲೆ ನನಗೆ ಎಚ್ಚರವಾಯಿತು ', ಎಂದು ಮಾತು ಮುಗಿಸಿದಳು. ದುರ್ಯೋಧನ ತನ್ನ ದುಡುಕಿಗೆ ಮಿಡುಕಿದ. ನಕುಲನೆಂದರೆ ಮುಂಗಸಿ, ಮಾದ್ರೀಸುತನಲ್ಲ; ಅದು ಕನಸಿನಲ್ಲಿ ಕಾಣಿಸಿಕೊಂಡುದಕ್ಕಾಗಿಯೇ ಅವಳು ಸಂತಾಪಪಟ್ಟು ಶಾಂತಿಪೂಜೆಗೆ ಇಲ್ಲಿಗೆ ಬಂದಿರುವಳೆಂದು ಸಮಾಧಾನ ಪಟ್ಟುಕೊಂಡ. ' ನಕುಲನಿಂದ ಸರ್ಪಶತದಂಶನ ' ಎಂದು ಕೇಳಿಯೂ ' ಇದು ನನಗೆ ಹೇಗೆ ಅನ್ವಯವಾಗುತ್ತದೆ ? ' ಎಂಬ ಗತ್ತು ಅವನದು. ' ಗ್ರಹಾದಿಗಳ ಸಂಚಾರ, ಸ್ವಪ್ನಸುದ್ದಿಗಳು ಕಾಕತಾಳೀಯ ' ವೆಂಬ ಭಾವ ಅವನದು. ಅವಳೆಸಗಲಿರುವ ಪೂಜೆಯಲ್ಲಿ ಅವನಿಗೆ ಅನಾದರ. ಸಖಿ ತಂದ ಪೂಜಾಸಾಮಗ್ರಿಯ ತಟ್ಟೆಯನ್ನು ಅವಳಿಂದ ಕಸುಗೊಂಡು ಹಿಂಬದಿಯಿಂದ ಮಡದಿಗೆ ಕೊಡುವ ಚಾಪಲ್ಯ ಅವನಿಗೆ. ಕೊಡುವಾಗ ಅವಳ ಕರಸ್ಪರ್ಶದಿಂದ ನಡುಗಿದ ರಾಜನ ಕೈಯಿಂದ ತಟ್ಟೆ ಕೆಳಕ್ಕೆ ಬಿದ್ದು ವ್ರತಭಂಗವಾಗುತ್ತದೆ. ಮಡದಿಯ ಮುನಿಸು. ಅವಳನ್ನು ಅನುನಯಮಾಡುವ ಬಾಲಿಶತನ ಮುಂತಾದವು ದುರ್ಯೋಧನನಲ್ಲಿ ವ್ಯಕ್ತವಾಗಿವೆ. ಅಷ್ಟರಲ್ಲಿ ದೂರದಲ್ಲಿ ಗದ್ದಲ ! ಭಯಂಕರ ಬಿರುಗಾಳಿಗೆ ಹೆದರಿದ ಭಾನುಮತಿ ತಾನಾಗಿಯೇ ಬಂದು ಪ್ರಿಯನನ್ನು ಅಪ್ಪಿದ್ದು ಅವನಿಗೆ ಎಷ್ಟೋ ಸಂತಸ ನೀಡಿತು. ಆ ಚಂಡಮಾರುತದಿಂದ ರಥದ ಬಾವುಟ ಮುರಿಯಿತು. ಆದರೂ ಅವನಿಗೆ ' ಇದು ಭವಿಷ್ಯ

ದುರಂತದ ಸೂಚನೆ' ಎಂಬುದು ಹೊಳೆಯುಲೇ ಇಲ್ಲ. ಅದನ್ನು ಕಂಚುಕಿ ಸೂಚಿಸಿದಾಗಲೂ ಅವನ ಪ್ರತಿಕ್ರಿಯೆ ಕೇವಲ ಮಂದಸ್ಮಿತ !

ದುರ್ಯೋಧನ ಅದೂರದರ್ಶಿಮಾತ್ರವಲ್ಲದೆ ಅವನದು ಹಿತ್ತಾಳೆ ಕಿವಿ. ಆದ್ದರಿಂದಲೇ ಅವನು ಕರ್ಣನ ಮಾತುಗಳಿಗೆ ಕಿವಿಗೊಟ್ಟು ಅಶ್ವತ್ಥಾಮನನ್ನು ದೂರಮಾಡುತ್ತಾನೆ. ಎದುರಾಳಿಯ ಮಾತಿನ ಇಂಗಿತವನ್ನರಿಯದ ಕುರುಪತಿ ಕರ್ಣನಲ್ಲಿಟ್ಟಿದ್ದ ಅಂಧ ವಿಶ್ವಾಸದ ಫಲವಾಗಿ ಅನೇಕ ತೊಂದರೆಗಳಿಗೆ ಈಡಾಗಬೇಕಾಯಿತು.

ಪ್ರತಿನಾಯಕನಿಗೆ ಅನ್ವಯಿಸುವ ಎಷ್ಟೇ ಅವಗುಣಗಳಿದ್ದರೂ ನಾವು ದುರ್ಯೋಧನನಲ್ಲಿದ್ದ ಕೆಲವು ಉದಾತ್ತ ಗುಣಗಳನ್ನು ಮರೆಯುವಂತಿಲ್ಲ. ದುರ್ಯೋಧನನಿಗೆ ತಮ್ಮಂದಿರಲ್ಲಿ ಅಮಿತ ವಾತ್ಸಲ್ಯ. ಮಿತ್ರ ಕರ್ಣನಲ್ಲಿ ಅಭೇದಭಾವ, ಮಾತಾಪಿತೃಗಳಲ್ಲಿ ಅಪಾರ ಭಕ್ತಿ. ಅವನ ಉದಾತ್ತತೆಯನ್ನು ಕವಿ ನಾಲ್ಕು ಮತ್ತು ಐದನೆಯ ಅಂಕಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಯುದ್ಧಕ್ಷೇತ್ರದಲ್ಲಿ ಗಾಯಗೊಂಡಿದ್ದ ದುರ್ಯೋಧನ ಮುರಿದ ಬಾವುಟದ ರಥದಲ್ಲಿ ಮೂರ್ಛೆಗೊಂಡಿದ್ದಾನೆ. ದುಶ್ಶಾಸನನ ಎದೆಗುಂಡಿಗೆಯ ಬಿಸಿ ನೆತ್ತರನ್ನು ಹೀರಿ ರಕ್ತಸಿಕ್ತಾಂಗನಾಗಿ ಕೆರಳಿದ ಕೇಸರಿಯಂತೆ ಭೀಮಕಾಯ ವೃಕೋದರ ರಣರಂಗದಲ್ಲಿ ವಿಜೃಂಭಿಸಿ ಅಡ್ಡಾಡುತ್ತಿದ್ದಾನೆ. ಸೂತ ಅವನ

ಕಣ್ಣು ತಪ್ಪಿಸಿ ರಾಜನ ರಥವನ್ನು ಮರಗಳ ಗುಂಪಿನಲ್ಲಿ ತಂದು ನಿಲ್ಲಿಸಿದ್ದಾನೆ. ಅಷ್ಟರಲ್ಲಿ ದುರ್ಯೋಧನನಿಗೆ ಎಚ್ಚರ. ಅವನು 'ದುಶ್ಶಾಸನ, ಹೆದರಬೇಡ! ನಾನು ಬದುಕಿರುವಾಗ ಆ ವೃಕೋದರನಿಗೆ ತನ್ನ ಪ್ರತಿಜ್ಞೆ ಪೂರೈಸುವ ಶಕ್ತಿಯುಂಟೆ?' ಎಂದು ಕನವರಿಸುತ್ತಾನೆ.

ಕರ್ಣಸಾರಥಿ ಸುಂದರಕ ಬಂದು ರಣವಾರ್ತೆ ಹೇಳ ತೊಡಗುತ್ತಾನೆ. ವೃಷಸೇನ–ಅರ್ಜುನರ ಕಾಳಗ; ಕರ್ಣಸುತ ವೃಷಸೇನನ ಸಾಹಸ ಕೇಳಿ ಅವನು 'ಶಹಬಾಷ್' ಎನ್ನುತ್ತಾನೆ! ವೃಷಸೇನನ ಮರಣದ ಸುದ್ದಿ ಕೇಳಿದಾಗ ಅವನಿಗಾದ ಸಂತಾಪ ಹೇಳತೀರದು. ಕರ್ಣಾರ್ಜುನ ಕಾಳಗದ ಸುದ್ದಿ ಕೇಳುವಾಗ ಅವನ ಮೈ ಉಬ್ಬಿತು. ಆದರೂ ಅದು ಬಹಳ ಹೊತ್ತಿರಲಿಲ್ಲ. ಕರ್ಣ ರಣರಂಗದಲ್ಲಿ ತನ್ನ ಮೈಮೇಲಿನ ಬಟ್ಟೆ ಹರಿದು ಅದರ ಮೇಲೆ ರಕ್ತಲಿಪ್ತ ಬಾಣಾಗ್ರದಿಂದ ಬರೆದು ಕಳುಹಿಸಿದ ಪತ್ರವನ್ನು ಓದುತ್ತಿದ್ದಂತೆಯೇ ಅದು ಕರಗಿಹೋಯಿತು. 'ದುಶ್ಶಾಸನ ಶತ್ರುವನ್ನು ಕೊಲ್ಲುವುದು ಕರ್ಣನಿಂದಾಗಲಿಲ್ಲ' ಎಂಬುದನ್ನು ಓದಿದಾಗ ಕರ್ಣನ ಬಗ್ಗೆ ಜುಗುಪ್ಸೆಗೆ ಬದಲಾಗಿ ಅವನಿಗೆ ಕರುಣ ಉಂಟಾಯಿತು. 'ಆದರೆ ನೀನೆ ನಿನ್ನ ಭುಜಬಲದಿಂದಾಗಲಿ, ಕಣ್ಣೀರಿನಿಂದಾಗಲಿ ಪ್ರತೀಕಾರ ಮಾಡು' ಎಂದಾಗ ಕರ್ಣನಲ್ಲಿ ಇಟ್ಟಿದ್ದ ಅವನ ಭರವಸೆ ನಡುನೀರಿನಲ್ಲಿ ಕೈಬಿಟ್ಟಂತಾಗಿತ್ತು. ಆಗ ತೋರಿದ ದುರ್ಯೋಧನನ ಪ್ರತಿಕ್ರಿಯೆ ಅವನ ಆದರ್ಶ ಮೈತ್ರಿಯನ್ನು ಸಾರುತ್ತದೆ. ಅವನು ಕರ್ಣನಿಗೆ ಪ್ರತ್ಯುತ್ತರ ವಾಗಿ ಹೇಳಿದ ಮಾತುಗಳಿವು.

'ಸುಂದರಕ, ಬೇಗನೆ ಹೋಗಿ ಕರ್ಣನಿಗೆ ಹೇಳು. 'ಸಾಹಸವನ್ನು ನಿಲ್ಲಿಸು. ನಮ್ಮಿಬ್ಬರ ಸಂಕಲ್ಪವೂ ಒಂದೇ ಆಗಿದೆ. ನೀನೊಬ್ಬನೇ ಜೀವಪರಿತ್ಯಾಗ ಮಾಡಬೇಕಾಗಿಲ್ಲ. ವೃಷಸೇನ ನಿನಗೆ ಮಾತ್ರ ಮಗನಲ್ಲ. ದುಶ್ಶಾಸನ ಕೇವಲ ನನಗೊಬ್ಬನಿಗೇ ತಮ್ಮನೂ ಅಲ್ಲ. ನಾನೇನನ್ನುತಾನೆ ನಿನಗೆ ಹೇಳಿ ಕಳುಹಿಸಲಿ ! ನೀನು ತಾನೆ ಹೇಗೆ ನನ್ನನ್ನು ಸಮಾಧಾನಗೊಳಿಸುವೆ. ಇಗೋ, ನಾನೂ ಬೇಗನೆ ಬಂದು ನಿನ್ನನ್ನು ಕೂಡಿಕೊಳ್ಳುವೆನು'

'ಅರ್ಜುನನೊಡನೆ ಕಾದುತ್ತಿದ್ದ ಕರ್ಣ ವೀರಸ್ವರ್ಗವನ್ನೈದಿದ' ಎಂಬುದನ್ನು ಕೇಳಿದ ಕೂಡಲೆ ದುರ್ಯೋಧನ ಮೂರ್ಛಿತನಾದ. ಎಚ್ಚೆತ್ತ ಕುರುಪತಿ 'ಎಲೆ ಕರ್ಣ, ಕರ್ಣಾನಂದಕರವಾದ ಮಾತನ್ನು ಆಡಿ, ನನಗೆ ಸಂತೋಷವನ್ನುಂಟು ಮಾಡು ! ಎಂದೂ ಅಪ್ರಿಯವನ್ನು ಎಸಗದ ಕರ್ಣ, ವೃಷಸೇನ ವತ್ಸಲ, ಅಗಲಿದೆಯಾ ?' (೫–೧೪) ಎಂದು ಪೇಚಾಡಿದ. "ನನ್ನ ಪ್ರಾಣಕ್ಕಿಂತ ಅಧಿಕ ಅಂಗರಾಜ. ನೀನು ಮಡಿದಮೇಲೆ ನನಗೆ ಉಸಿರಾಡಲಿಕ್ಕೂ ನಾಚಿಕೆಯೆಂದಮೇಲೆ ಈ ಉಪಚಾರದಿಂದೇನು ?"

'ಯುದ್ಧ ಮಾಡುವಾಗ ಕರ್ಣನ ರಥ ನೆಲದಲ್ಲಿ ಹೂತಿತು. ಕರ್ಣ ರಥದಿಂದ ಇಳಿದು ಹೂತಿದ್ದ ಚಕ್ರವನ್ನು ಎತ್ತುತ್ತಿದ್ದ, ಅವನು ನಿರಾಯುಧನಾಗಿರುವಾಗ ಪಾರ್ಥನು ಎಚ್ಚ ಬಾಣದಿಂದ ಕರ್ಣ ನೆಲಕ್ಕುರುಳಿದ' ಎಂಬ ದಾರುಣ

ಸುದ್ದಿ ಕೇಳಿದಾಗ ಅವನು ಸಿಡಿದೆದ್ದ. ಅನ್ಯಾಯಕಾರಿ ಅರ್ಜುನನ ಮೇಲೆ ಸೇಡು ತೀರಿಸಲು ನಿರ್ಧರಿಸಿದ. ಕಡೆಗೆ ಹೀಗೆ ಹೇಳಿದ 'ವತ್ಸ ದುಶ್ಯಾಸನ ಅಥವಾ ಬಂಧುವರ್ಗದ ವಿಯೋಗಕ್ಕಾಗಿ ನಾನು ವ್ಯಥೆಪಡುವುದಿಲ್ಲ. ಆದರೆ ಕರ್ಣವಧೆಯ ಸುದ್ದಿ ನನಗೆ ಕರ್ಣಕಠೋರವಾಗಿದೆ. ಅಂಥ ಕರ್ಣನೇ ಅಳಿದಮೇಲೆ ನಮ್ಮ ಕುಲವೇ ಅಳಿಯಿತು !' (೫-೧೬) ಎಂಬ ಕುರುಪತಿಯ ಮಾತು ಗಳು ಕರ್ಣನ ಬಗ್ಗೆ ಅವನಿಗಿದ್ದ ಆದರ್ಶಮೈತ್ರಿಗೆ ನಿದರ್ಶನ. ಈ ಘಟನೆಗಳೇ ಪಂಪ, ರನ್ನರ ಉದಾತ್ತ ದುರ್ಯೋಧನನ ಚಿತ್ರಣಕ್ಕೆ ಪುಟಗೊಟ್ಟವು ಎಂಬುದನ್ನು ಸಾವಧಾನವಾಗಿ ಉಭಯಸಂದರ್ಭ ಗಳನ್ನು ಪರಿಶೀಲಿಸಿದರೆ ಖಚಿತವಾಗುತ್ತದೆ.

ದುರ್ಯೋಧನನಿಗೆ ತಮ್ಮ ದುಶ್ಯಾಸನನಲ್ಲಿದ್ದ ವಾತ್ಸಲ್ಯ ಅಪಾರ. ಅವನು ಮಡಿದ ಸುದ್ದಿ ಕೇಳಿದಾಗ ಅವನ ಪರಿತಾಪ ಹೇಳತೀರದು. "ಅಯ್ಯೋ, ಇಂದು ಬೆಳಿಗ್ಗೆ ದುಶ್ಯಾಸನನೊಂದಿಗೆ ತಂದೆ ತಾಯಿಗಳನ್ನು ವಂದಿಸಿದ್ದೆ. ಅವರು ತಲೆ ಮೂಸಿ ಇಬ್ಬರನ್ನೂ ಹರಸಿ ಕಳುಹಿಸಿದ್ದರು. ಈಗ ಅವರು 'ದುಶ್ಯಾಸ ನನೆಲ್ಲಿ ?' ಎಂದು ಕೇಳಿದರೆ ಏನು ಹೇಳಲಿ ?" ಎಂದು ಹಲುಬು ತ್ತಾನೆ.

ಧೃತರಾಷ್ಟ್ರ ಗಾಂಧಾರಿಯರು ರಾಜನನ್ನು ಅರಸಿ ಬಂದಾಗ ಅವನು ಆಲದ ಮರದ ಕೆಳಗೆ ಬರಿ ನೆಲದಮೇಲೆ ಒಬ್ಬನೇ ಕುಳಿತಿದ್ದ. ತಾಯಿ ಅದನ್ನು ಕೇಳಿ ಹೌಹಾರಿದಳು. "ಅಯ್ಯೋ, ಪಕ್ಕದಲ್ಲಿ ನೂರುಮಂದಿ ಸಹೋದರರೂ ಇಲ್ಲ

ವಾದರೆ ?" ಎಂದು ಅಂಗಲಾಚಿತು ಹೆತ್ತ ಕರುಳು. ತನ್ನನ್ನು ಮಗನೆಂದು ಸಂಬೋಧಿಸಿದ ತಾಯಿಗೆ ಅವನ ಉತ್ತರವಿದು. "ಅಮ್ಮ ನನ್ನನ್ನು ಮಗನೆಂದು ಏಕೆ ಕರೆಯುವೆ ?" ದೈನ್ಯದಿಂದ ಗದ್ಗದಿಸಿ ಹೇಳತೊಡಗಿದ ಕುರುಪತಿ. "ಕಣ್ಣೆದುರಿಗೇ ನೂರು ಮಂದಿ ತಮ್ಮಂದಿರ ಕಗ್ಗೊಲೆಯಾಗುತ್ತಿದ್ದರೂ ಪ್ರತಿಭಟಿಸದ ಪಾಪಿ ನಾನು. ತಾಯಿ ತಂದೆಗಳ ಕಣ್ಣೀರಿಗೆ ಕಾರಣನಾದವನು ನಾನು. ಪವಿತ್ರ ಭರತಕುಲಕ್ಕೆ ಕಳಂಕ ನನ್ನಿಂದ! ಸುತ ಕ್ಷಯಕ್ಕೆ ಕಾರಣನಾದ ನನ್ನನ್ನು ಸುತನೆಂದು ಏಕೆ ಹೇಳುವೆ ಯಮ್ಮ!" (೫-೨)

ತಾಯಿ ಅವನನ್ನು ಸಮಾಧಾನಗೊಳಿಸಿ "ಅಂಧರಾದ ನಮಗೆ ಊರುಗೋಲಾದವನು ನೀನೊಬ್ಬನೇ! ನೀನಾದರೂ ಚಿರಕಾಲ ಬಾಳು...." ಎಂದಾಗ ಅವನು ಕೊಟ್ಟ ಉತ್ತರ ಅವನ ಧೀರತ್ವಕ್ಕೆ ನಿದರ್ಶನ.

"ಎಂಥ ಕನಿಷ್ಠ ಬಯಕೆಯಮ್ಮ ನಿನ್ನದು! ವೀರ ಮಾತೆಯಾದ ನೀನೆಲ್ಲಿ ? ಈ ದೀನೋಕ್ತಿಯೆಲ್ಲಿ ? ಮಡಿದ ನೂರುಜನ ಮಕ್ಕಳ ದುರ್ಗತಿಯನ್ನು ನೆನೆಯದೆ ಅಯೋಗ್ಯನಾದ ನನ್ನ ಬಗೆಗೆ ಚಿಂತಿಸುವುದೇ ?" (೪-೩)

'ಯುಧಿಷ್ಠಿರನಲ್ಲಿ ಸಂಧಿಮಾಡಿಕೊ' ಎಂದು ಧೃತರಾಷ್ಟ್ರ ಹೇಳಿದಾಗ ಅವನು "ಶತ್ರುವಿಗಿಂತ ಕಡಮೆಯುಳ್ಳದವರು ಶತ್ರುವಿನೊಡನೆ ಸಂಧಿ ಬಯಸುವರು. ಈಗ ನಾವು ದುಶ್ಶಾಸನಾದಿಗಳ ವಿಯೋಗದಿಂದ ಭ್ರಾತೃವಿಹೀನರು. ಯುಧಿಷ್ಠಿರ ಭ್ರಾತೃಪರಿವೃತ. ಅಂದಮೇಲೆ ಅವರೊಡನೆ ನಮಗೆ ಸಂಧಿ ಕುದುರುವುದೇ ?"

ಎಂದು ಅದನ್ನು ಅಲ್ಲಗಳೆಯುತ್ತಾನೆ. ಕಡೆಗೆ ಧೃತರಾಷ್ಟ್ರ 'ನಿನ್ನ ಯುದ್ಧನಿಶ್ಚಯವನ್ನು ಬದಲಿಸಲು ಸಾಧ್ಯವಿಲ್ಲ. ಮಗು, ಕೂಟಯುದ್ಧವನ್ನಾದರೂ ಹೂಡಿ ಶತ್ರುಪ್ರತೀಕಾರ ಮಾಡು' ಎಂದಾಗ ಹೇಳಿದ ದುರ್ಯೋಧನನ ಉತ್ತರ ಅವನ ಉದಾತ್ತ ವ್ಯಕ್ತಿತ್ವಕ್ಕೆ ಜೀವಂತ ನಿದರ್ಶನ. ಅವನು ಹೇಳಿದ,

'ಅಪ್ಪ, ಪಾಂಡವರು ನನ್ನ ತಮ್ಮಂದಿರೆಲ್ಲರನ್ನೂ ನಮ್ಮೆದುರಿಗೇ ಕೊಂದರು. ಅಂದಮೇಲೆ ಅಂಥವರನ್ನು ಕೃತ್ರಿಮದಿಂದ ಕೊಲ್ಲುವುದು ನಮಗೆ ಭೂಷಣವಲ್ಲವಲ್ಲವೆ?'

ವೈಶಂಪಾಯನ ಸರಸ್ಸಿನಲ್ಲಿ ತಲೆಮರೆಸಿಕೊಂಡಿದ್ದ ಕುರುಪತಿ ಭೀಮನ ಕಟೂಕ್ತಿಗಳಿಗೆ ಮಿಡುಕಿದ. ಭೀಮ ಗದೆಯಿಂದ ಸರೋವರವನ್ನು ಕಲಕತೊಡಗಿದ. ಆಗ ಕ್ಷೀರಸಾಗರವನ್ನು ಮಂದರಗಿರಿಯಿಂದ ಕಡೆದಾಗ ಕಾಲಕೂಟವು ಮೇಲೆ ಬಂದಂತೆ ದುರ್ಯೋಧನ ರಭಸದಿಂದ ಮೇಲೆದ್ದ. ಭೀಮ 'ನಮ್ಮೈವರಲ್ಲಿ ನಿನಗೆ ಯಾವನು ಅರ್ಹನೆಂದು ಬಗೆಯುವೆಯೋ ಅವನೊಂದಿಗೆ ನಿನ್ನ ರಣೋತ್ಸವ ನಡೆಯಲಿ'(೬–೧೦)

ಎಂದಾಗ ಅಭಿಮಾನಧನ ದುರ್ಯೋಧನನ ಉತ್ತರ ಅವನ ಉದಾತ್ತ ವೀರ್ಯಕ್ಕೆ ಸಾಕ್ಷಿ. 'ಹೇ ಮಾರುತಿ, ಕರ್ಣ, ದುಶ್ಶಾಸನರನ್ನು ಕೊಂದವರು ಪಾರ್ಥ ಮತ್ತು ನೀನು. ನೀವಿಬ್ಬರೂ ನನಗೆ ಅಪ್ರಿಯರೇ, ಆದರೆ ಅವರಲ್ಲಿ ಪ್ರಿಯಸಾಹಸನಾದ ನೀನೇ ನನಗೆ ಕಾದಲು ಯೋಗ್ಯ' ಎಂದ.

೪) **ಕರ್ಣ :** ವೇಣೀಸಂಹಾರದಲ್ಲಿ ಕರ್ಣನ ಪಾತ್ರ ಅಂಥ ಉದಾತ್ತನಾಗಿ ಚಿತ್ರಿತವಾಗಿಲ್ಲ. ಅದೂರದರ್ಶಿಯೂ, ಸ್ವಬುದ್ಧಿರಹಿತನೂ, ಪರಪ್ರೇರಿತಬುದ್ಧಿಯೂ ಆದ ದುರ್ಯೋಧನನ ಮನೋದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡವರಲ್ಲಿ ಕರ್ಣನಿಗೆ ಅಗ್ರಸ್ಥಾನವುಂಟು ಎಂಬುದಕ್ಕೆ ಮೂರನೆಯ ಅಂಕದಲ್ಲಿ ಬರುವ ಕರ್ಣಾಶ್ವತ್ಥಾಮರ ವಿವಾದಪ್ರಸಂಗ ನಿದರ್ಶನ. ಕರ್ಣನಿಗೆ ದ್ರೋಣನಲ್ಲಿ ಮೊದಲೇ ಅಸೂಯೆ ಹೊಗೆಯಾಡುತ್ತಿತ್ತು. ಅವನಿಗೆ ಅದನ್ನು ಹೊರಪಡಿಸುವ ಸದವಕಾಶ ಈಗ ದೊರೆತಿತ್ತು. ದ್ರೋಣ ಅಶ್ವತ್ಥಾಮರ ಬಗೆಗೆ ರಾಜನಲ್ಲಿ ಅಪನಂಬಿಕೆಯನ್ನು ಉಂಟುಮಾಡಿ ತಾನು ಸೇನಾಪತಿಯಾಗುವ ಹಂಚಿಕೆ ಅವನದು. ಅದಕ್ಕಾಗಿ ಅವನು ಸಮಯ ಕಾಯುತ್ತಿದ್ದ.

'ದ್ರೋಣಾಚಾರ್ಯರು ಯುದ್ಧದಲ್ಲಿ ಶಸ್ತ್ರತ್ಯಾಗಮಾಡಲು ಕಾರಣವೇನು ? ಎಷ್ಟಾದರೂ ವಿಪ್ರಬುದ್ಧಿ !' ಎಂಬ ಕುರುಪತಿಯ ಸಂದೇಹಕ್ಕೆ ಕರ್ಣನ ವ್ಯಾಖ್ಯೆ ಇದು, 'ಹಾಗಲ್ಲ ಪ್ರಭು, ದ್ರೋಣನಿಗೆ ಮಗನನ್ನು ಈ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುವ ಬಯಕೆ ಇತ್ತು. ಅದಕ್ಕಾಗಿಯೇ ಅವನು ಪಾಂಡವವೀರರನ್ನು ಹತ್ತಿಕ್ಕಲು ಹೊರಟದ್ದು ! ಆದರೆ ಅಷ್ಟರಲ್ಲಿ ಮಗನ ಮರಣವಾರ್ತೆ ಕೇಳಿಸಿತು. ಅವನೇ ಇಲ್ಲವಾದಮೇಲೆ ಮುದುಕನೂ ವಿಪ್ರನೂ ಆದ ನನಗೇಕೆ ಶಸ್ತ್ರಾಸ್ತ್ರಗಳು ಎಂದು ಅವನ್ನು ಕೈಬಿಟ್ಟ !'

ಇದಿಷ್ಟರಿಂದ ರಾಜನಿಗೆ ನಂಬಿಕೆ ಬಂದಿರಲಿಲ್ಲ. ಅದನ್ನರಿತ ಕರ್ಣ ಆ ಮಾತನ್ನು ಮುಂದುವರಿಸಿ 'ಪ್ರಭು, ಈತನ ದುರ್ಬುದ್ಧಿ

ಯನ್ನು ಮನಗಂಡೇ ಬಾಲ್ಯಸ್ನೇಹಿತ ದ್ರುಪದ ಎಷ್ಟೋ ಹಿಂದೆಯೇ ಅವನನ್ನು ತನ್ನ ರಾಜ್ಯದಿಂದ ಓಡಿಸಿದ್ದು!' ಎಂದ. ಹಿತ್ತಾಳೆ ಕಿವಿಯ ಕೌರವನಿಗೆ ಕರ್ಣನ ಈ ನುಡಿ ಕರ್ಣರಸಾಯನವಾಯಿತು.

ಕೌರವ ನಿರುತ್ತರನಾದ; ಮಾತ್ರವಲ್ಲ, ಕರ್ಣನ ಮಾತಿಗೆ ತನ್ನ ದನಿಗೂಡಿಸಿ 'ಹೌದು ಅಂಗರಾಜ, ನಿನ್ನ ಮಾತು ನಿಜ! ಸೈಂಧವನ ತಲೆಗಾಯ್ವೆನೆಂದು ಪಣತೊಟ್ಟಿದ್ದ ಆಚಾರ್ಯರು ಅರ್ಜುನ ಅವನ ವಧೆಮಾಡುತ್ತಿದ್ದಾಗ ಅಲಕ್ಷ್ಯ ಮಾಡಿದ್ದು ಇದಕ್ಕಾಗಿಯೇ ಇರಬೇಕೆಂದು ಈಗ ನನಗೆ ಹೊಳೆಯುತ್ತದೆ' ಎನ್ನುತ್ತಾನೆ!

ಮೇಲಾಗಿ ಕರ್ಣ ಮಹಾವೀರ. ಕುರುಪಾಂಡವ ದಳಗಳಲ್ಲಿ ಪಾರ್ಥನನ್ನು ಬಿಟ್ಟರೆ ಕರ್ಣನೊಬ್ಬನೇ ಏಕಾಂಗವೀರ. ಅದಕ್ಕಾಗಿಯೇ ಕುರುಪತಿ ಬಾಲ್ಯದಿಂದಲೇ ಅವನಿಗೆ ಆಶ್ರಯ ನೀಡಿದ್ದುದು. ಅವನಿಗಿದ್ದ 'ಸೂತಪುತ್ರ'ನೆಂಬ ಅಪವಾದವನ್ನು ತೊಳೆಯಲೆಂದೇ ಅವನಿಗೆ ಅಂಗರಾಜ್ಯ ಪಟ್ಟಾಭಿಷೇಕ ಮಾಡಿದ್ದೂ ಕೂಡ. ದುರ್ಯೋಧನನೇ ಹೇಳುವಂತೆ ಕರ್ಣನಲ್ಲಿ ಅವನಿಗೆ ತನ್ನ ತಮ್ಮಂದಿರಲ್ಲಿದ್ದುದಕ್ಕಿಂತ ವಾತ್ಸಲ್ಯ ಮಿಗಿಲು. ಅಭೇದ ಬುದ್ಧಿಯೂ ಇತ್ತು. ಮಾತ್ರವಲ್ಲದೆ ಕರ್ಣ ಸ್ವಾಭಿಮಾನಿ. ತನ್ನೆದುರಿಗೆ ಪ್ರತಾಪ ಕೊಚ್ಚುವವರನ್ನು ಕಂಡರೆ ಅವನು ಸಹಿಸುತ್ತಿರಲಿಲ್ಲ. ಆದ್ದರಿಂದಲೇ ಅವನು ರಾಜನೆದುರಿಗೆ ಅಶ್ವತ್ಥಾಮ,

ಅಕೇಶವಮಪಾಂಡವಂ ಭುವನಮದ್ಯನಿಃಸೋಮಕಂ
ಇಯಂ ಪರಿಸಮಾಪ್ಯತೇ ರಣಕಥಾದ್ಯ....

'ನಾನು ಸೇನಾಪತಿಯಾದರೆ ಕೇಶವ, ಪಾಂಡವ, ಪಾಂಚಾಲರನ್ನೆಲ್ಲ ಕೊಂದು ರಣಕಥೆಯನ್ನು ಇಂದೇ ಮುಗಿಸಿ ಬಿಡುತ್ತೇನೆ' ಎಂದ ಆಟಾಟೋಪವನ್ನು ಪ್ರತಿಭಟಿಸಿದ. ಮಾತ್ರವಲ್ಲದೆ ಅಶ್ವತ್ಥಾಮ ಕರ್ಣನನ್ನು 'ಸೂತಪುತ್ರ'ನೆಂದು ಹೀಯಾಳಿಸಿದಾಗ

ಸೂತೋ ವಾ ಸೂತಪುತ್ರೋ ವಾ ಯೋ ವಾ ಕೋ ವಾ ಭವಾಮ್ಯಹಮ್।
ದೈವಾಯತ್ತಂ ಕುಲೇ ಜನ್ಮ ಮದಾಯತ್ತಂ ತು ಪೌರುಷಮ್॥ (೩-೩೩)

'ನಾನು ಸೂತನಾಗಲಿ, ಸೂತಪುತ್ರನೇ ಆಗಲಿ ನಿನಗೇನು? ಉತ್ತಮ ಕುಲದಲ್ಲಿ ಹುಟ್ಟುವುದು ದೈವಾಧೀನ. ಆದರೆ ಪೌರುಷ ನನ್ನ ಅಧೀನ' ಎಂದು ಕೊಟ್ಟ ದಿಟ್ಟ ಉತ್ತರ ಅವನಿಗೆ ಭೂಷಣ. ಅದನ್ನು ಕೇಳಿ ಕಿಡಿಕಿಡಿಯಾದ ಅಶ್ವತ್ಥಾಮ, 'ಭುಜಬಲದಿಂದ ಕೊಬ್ಬಿರುವ ನಿನ್ನ ತಲೆಯಮೇಲೆ ನನ್ನ ಎಡಗಾಲನ್ನಿಡುತ್ತೇನೆ. ಶಕ್ತಿಯಿದ್ದರೆ ತಡೆದುಕೋ!' ಎಂದಾಗ ಕರ್ಣ 'ಎಲೊ ನೀಚಬ್ರಾಹ್ಮಣ, ಆತ್ಮಶ್ಲಾಘಿನ್, ನೀನು ಕೊಲ್ಲಬಾರದ ಕುಲದಲ್ಲಿ ಹುಟ್ಟಿರುವೆ, ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನಿನ್ನ ತಲೆ ಕತ್ತರಿಸಿ ಬೀಳುತ್ತಿತ್ತು.'

ಜಾತ್ಯಾ ಕಾಮಮವಧ್ಯೋಽಸಿ ಚರಣಂ ತ್ವಿದಮುದ್ಧೃತಮ್।
ಅನೇನ ಲೂನಖಡ್ಗೇನ ಪತಿತಂ ದ್ರಕ್ಷ್ಯಸಿ ಕ್ಷಿತೌ॥ (೩-೪೧)

ಎಂದು ಧಿಕ್ಕರಿಸಿದ. ಪರಿಸ್ಥಿತಿ ವಿಷಮಿಸಿದುದನ್ನು ಕಂಡ ಕುರುಪತಿ ಮಧ್ಯೆ ಬಂದು ಸಮಾಧಾನಪಡಿಸಬೇಕಾಯಿತು.

೫) **ಅಶ್ವತ್ಥಾಮ:** ಮಹಾವೀರ, ಶತ್ರುನಿರ್ಮೂಲನ ಸಮರ್ಥ, ಕೌರವಪಕ್ಷಪಾತಿ, ಪಿತೃಭಕ್ತಿಪರಾಯಣ. ಆದರೆ ಅವನ ದುಡುಕು ಮತ್ತು ಆವೇಶಗಳು ಅಶ್ವತ್ಥಾಮನ ಶೌರ್ಯ ವನ್ನು ಬೆಳಗಲು ಅಡ್ಡಿಯಾದವು. ಈ ಸಂದರ್ಭವನ್ನು ಕವಿ ಹೃದಯಂಗಮವಾಗಿ ಚಿತ್ರಿಸಿದ್ದಾನೆ. ರಣಮಧ್ಯದಲ್ಲಿ ಮೃತನಾದ ತಂದೆ ದ್ರೋಣನನ್ನು ಅವಲಂಬಿಸಿ ಕರುಣರಸ ಇಲ್ಲಿ ಅಭಿವ್ಯಕ್ತ ವಾಗಿದೆ.

ದ್ರೋಣನ ಸಾರಥಿ ಅಶ್ವಸೇನ ಬಂದು ಅಡ್ಡಬಿದ್ದು ಅವನಿಗೆ ತಂದೆಯ ದುರಂತ ಮರಣವಾರ್ತೆ ಮುಟ್ಟಿಸಿದಾಗ ಅಶ್ವತ್ಥಾಮ 'ಹಾ, ತಾತ! ಪುತ್ರವತ್ಸಲ!' ಎಂದು ಹೌಹಾರಿದ. ಆತ ಯುಧಿಷ್ಠಿರನ 'ಅಶ್ವತ್ಥಾಮೋ ಹತಃ' ಎಂಬ ಮಾತನ್ನು ಕೇಳಿ ನಿರಸ್ತ್ರನಾಗಿರುವಾಗ ವೈರಿಯೊಬ್ಬ ಅವನನ್ನು ದಾರುಣವಾಗಿ ಘಾತಿಸಿದ!'ಎಂಬುದನ್ನು ಕೇಳಿದಮೇಲಂತೂ ಅವನು ಮೂರ್ಛಿತ ನಾದ. ಪ್ರಲಾಪಿಸಿದ. ಆಗ ಅವನ ಮುಖದಿಂದ ಬಂದ ಉದ್ಗಾರ ಗಳು ಅವನ ಪಿತೃಭಕ್ತಿಗೆ ಉಚಿತವೇ ಆಗಿವೆ. 'ತಾತ, ಪುತ್ರ ವತ್ಸಲ! ನೀನು, ನಾನು ಸತ್ತೆನೆಂಬ ಸುಳ್ಳು ಸುದ್ದಿಯನ್ನು ಕೇಳಿ ಧನುರ್ಬಾಣಗಳ ಜೊತೆಗೆ ಪ್ರಾಣಗಳನ್ನೂ ನೀಗಿದೆ. ಆದರೆ ಹೀಗೆ ನೀನು ನನಗಾಗಿ ಅಸುವಳಿದ ಸುದ್ದಿಯನ್ನು ಪ್ರತ್ಯಕ್ಷವಾಗಿ ಕೇಳಿದಮೇಲೆಯೂ ನಾನಿನ್ನೂ ಬದುಕಿದ್ದೇನೆ! (೩-೧೨)

ಇದರಿಂದ ಉದ್ವಿಗ್ನನಾದ ಅವನು ಕುರುಪತಿಯನ್ನೂ ಯುಧಿಷ್ಠಿರನನ್ನೂ ಹಳಿದು ಹಿಂದೆ ದ್ರೌಪದಿಯ ಕೇಶಗ್ರಹಣ ಮಾಡಿದಾಗ ಚಿತ್ರದಲ್ಲಿ ಬರೆದ ಗೊಂಬೆಗಳಂತೆ ನೋಡುತ್ತಿದ್ದವ

ರೆಲ್ಲರನ್ನೂ ಹೀಯಾಳಿಸಿದ. (೩–೧೩) ಯುಧಿಷ್ಠಿರನ ಬಗ್ಗೆ ಅವನು ಹೇಳಿರುವ ಒಂದು ಮಾತು ಸ್ಮರಣೀಯ,

'ಅಯ್ಯೋ, ಯುಧಿಷ್ಠಿರ! ನೀನು ಹುಟ್ಟಿದಂದಿನಿಂದಲೂ ಒಮ್ಮೆಯೂ ಸುಳ್ಳಾಡಿದವನಲ್ಲ. ಆದ್ದರಿಂದಲೇ ನೀನು ಅಜಾತ ಶತ್ರು. ನನ್ನ ತಂದೆ ನಿನಗೆ ವಿದ್ಯಾಗುರು, ದ್ವಿಜವರ. ಆದರೆ ನನ್ನ ದೌರ್ಭಾಗ್ಯದಿಂದ ಇದೆಲ್ಲವೂ ಒಮ್ಮೆಯೇ ನಷ್ಟವಾಯಿತು.

ಆಜನ್ಮನೋ ನ ವಿತಥಂ ಭವತಾ ಕಿಲೋಕ್ತಂ
ನ ದ್ವೇಕ್ಷಿ ಯಜ್ಜನಮತಸ್ತ್ವಮಜಾತಶತ್ರುಃ ।
ತಾತೌ ಗುರೌ ದ್ವಿಜವರೇ ಮಮ ಭಾಗ್ಯದೋಷಾತ್
ಸರ್ವಂ ಹಿ ತದೇಕಪದ ಏವ ಕಥಂ ನಿರಸ್ತಮ್॥ (೩–೧೫)

ಇದೆಲ್ಲ ವಿಧಿವಿಲಾಸ, ಮತ್ತು ತನ್ನ ದೌರ್ಭಾಗ್ಯ ಎಂಬ ತೀರ್ಮಾನಕ್ಕೆ ಬಂದಿರುತ್ತಾನೆ. ನಿರಸ್ತ್ರನಾಗಿದ್ದ ತನ್ನ ತಂದೆಯನ್ನು ಕೊಂದ ದುಷ್ಟದ್ಯುಮ್ನನ ಬಗ್ಗೆ ಕ್ರೋಧ, ತಿರಸ್ಕಾರ. 'ಶೋಕಾಂಧನಾಗಿ ದೇಹತ್ಯಾಗ ಮಾಡಿದ ನಿನ್ನ ತಲೆಯನ್ನು ದುಷ್ಟದ್ಯುಮ್ನನೇ ಏಕೆ ನಾಯಿ ಕಾಗೆಗಳೂ ಕೂಡ ಮುಟ್ಟ ಬಲ್ಲವು, ಆದರೆ ಮದೋನ್ಮತ್ತನಾದ ಆ ದುಷ್ಟನು ಬದುಕಿರು ವಾಗಲೇ ಅವನ ತಲೆಯಮೇಲೆ ನನ್ನ ಪಾದವನ್ನಿರಿಸುತ್ತೇನೆ' ಎಂಬ ಪ್ರತಿಜ್ಞೆ.

ಬಾಲ್ಯದಿಂದಲೂ ಅಶ್ವತ್ಥಾಮನ ಸಾಮರ್ಥ್ಯವನ್ನು ಬಲ್ಲವ ಕೃಪ. ಅವನು ಅವನ ಪ್ರತಿಜ್ಞೆ ಫಲಮುಖವಾಗಲು ಒಂದು ಯೋಜನೆಯನ್ನು ಯೋಚಿಸಿ ಹೇಳಿದ. 'ಮಗು, ನೀನು

ಪಿತೃವಧೆಯ ಸೇಡು ತೀರಿಸುವುದು ಯೋಗ್ಯ. ಆದರೆ ಏಕಾಕಿಯಾಗಿ ಅಲ್ಲ; ಕೌರವಸೇನಾಪತಿಯಾಗಿ ಈ ಕೆಲಸ ಮಾಡು' ಎಂದು. ಅದೂ ಅವನಿಗೆ ರುಚಿಸಲಿಲ್ಲ. ಆದರೆ ಅಷ್ಟಕ್ಕೇ ಕೃಪ ಬಿಟ್ಟುಕೊಡದೆ 'ಭೀಷ್ಮ, ದ್ರೋಣರು ಅಳಿದಮೇಲೆ ಅವರಿಗೆ ಹೊಯ್‌ಕಯ್ಯಾಗಿರುವ ವೀರನೆಂದರೆ ನೀನಲ್ಲದೆ ಮತ್ತಾರು?' ಎಂದು ಉಬ್ಬಿಸಿದ. ಮತ್ತು ಅವನನ್ನು ಕುರುಪತಿಯೆಡೆಗೊಯ್ಯುದ್ದ ಸೂಚಿಸಿದ. ಆದರೆ ಕರ್ಣನ ಕೌಟಿಲ್ಯದಿಂದ ಈ ಯೋಜನೆ ಮುರಿದುಬಿತ್ತು. ಮಾತ್ರವಲ್ಲದೆ ಮಾತಿಗೆ ಮಾತು ನಡೆದು ಕರ್ಣಾಶ್ವತ್ಥಾಮರ ಭಯಂಕರ ಕಲಹದಲ್ಲಿ ಅದು ಕೊನೆಗಂಡಿತು.

ಮೊದಲೆ ಪಿತೃವಿಯೋಗದಿಂದ ಸಂತಪ್ತನಾಗಿದ್ದ ಅಶ್ವತ್ಥಾಮನಿಗೆ ಕರ್ಣನ ಚುಚ್ಚುಮಾತುಗಳು ಅವನ ದುಡುಕಿಗೆ ಪುಟಕೊಟ್ಟವು. ಕರ್ಣನೆಂದ 'ಜಾತ್ಯಾ ಕಾಮಮವಧ್ಯೋಽಸಿ' 'ನೀನು ಕೊಲ್ಲಬಾರದ ಕುಲದಲ್ಲಿ ಹುಟ್ಟಿರುವೆ' ಎಂಬ ಮಾತಿಗೆ ರೋಸಿದ ಅಶ್ವತ್ಥಾಮ 'ಎಲೋ ಮೂಢ, ಕೊಲ್ಲುವುದಕ್ಕೆ ನನ್ನ ಜಾತಿ ನಿನಗೆ ಅಡ್ಡ ಬಂದಿತೆ? ಇಗೋ ಬಾ, ಆ ಜಾತಿಯನ್ನು ತ್ಯಜಿಸಿದ್ದೇನೆ!' ಎಂದು ಜನಿವಾರವನ್ನೇ ಕಿತ್ತೆಸೆದು: 'ಕರ್ಣನನ್ನು ಕೊಲ್ಲುವೆನೆಂದ ಅರ್ಜುನನ ಪ್ರತಿಜ್ಞೆಯನ್ನೇ ಸುಳ್ಳು ಮಾಡುತ್ತೇನೆ' ಎಂದು ಆರ್ಭಟಿಸಿದ. ಮಧ್ಯೆಬಂದ ದುರ್ಯೋಧನ ಈರ್ವರನ್ನೂ ಸಮಾಧಾನಪಡಿಸಿದ. ಆದರೂ ಅಶ್ವತ್ಥಾಮ 'ಈ ಕರ್ಣ ಸಾಯುವವರೆಗೆ ನಾನು ಶಸ್ತ್ರ ಹಿಡಿಯುವುದಿಲ್ಲ' ಎಂದು ಶಸ್ತ್ರನ್ಯಾಸಮಾಡಿದ್ದು ಅವನ ಅವಿವೇಕಕ್ಕೆ ಹಿಡಿದ ಕನ್ನಡಿ. ಅದಕ್ಕೆ

ಕರ್ಣನ ಪ್ರತಿಕ್ರಿಯೆ 'ಶಸ್ತ್ರ ತ್ಯಾಗ ಮಾಡುವುದು ಅವರ ವಂಶದ ಚಾಳಿ!' ಎಂದು.

ಅಷ್ಟರಲ್ಲಿ ಭೀಮನ ಬಾಹುಪಂಜರದಲ್ಲಿ ದುಶ್ಶ್ಯಾಸನನು ಸಿಕ್ಕಿರುವನೆಂಬ ನುಡಿ ಕೇಳಿ ಕರ್ಣದುರ್ಯೋಧನರು ನಿರ್ಗಮಿಸಿದರು. ಅಶ್ವತ್ಥಾಮನೂ ಅವರನ್ನು ಹಿಂಬಾಲಿಸಲು ತನ್ನ ಪ್ರತಿಜ್ಞೆ ಮುರಿದು ಶಸ್ತ್ರಗ್ರಹಣ ಮಾಡಲು ಮುಂದಾದ, ಆದರೆ ಕೃಪ, ಪ್ರತಿಜ್ಞಾಭಂಗ ಬೇಡವೆಂದು ಅದನ್ನು ತಡೆದ. ಇದರಿಂದ ಅಶ್ವತ್ಥಾಮ ಇತ್ತ ತನ್ನ ಪಿತೃಭಕ್ತಿಯನ್ನಾಗಲಿ, ಅತ್ತ ರಾಜಭಕ್ತಿಯನ್ನಾಗಲಿ ಸಲ್ಲಿಸದಂತಾಗಿ ಅವನ ಶೌರ್ಯ ಕಾನನದ ಬೆಳದಿಂಗಳಾಯಿತು!

೬) ದ್ರೌಪದಿ: ನಾಟಕದಲ್ಲಿನ ಸ್ತ್ರೀ ಪಾತ್ರಗಳಲ್ಲಿ ದ್ರೌಪದಿಯ ಪಾತ್ರ ಮುಖ್ಯ. ಅಣ್ಣನು ಸಂಧಿಗಾಗಿ ಶ್ರೀಕೃಷ್ಣನನ್ನು ಕುರುಪತಿಯೆಡೆಗೆ ಕಳುಹಿಸಿರುವುದನ್ನು ಕೇಳಿ ಸಂಕ್ರುದ್ಧನಾದ ಭೀಮನಿಗೆ ದ್ರೌಪದಿ ಕಾಣಿಸಿಕೊಂಡುದು ಭೀಮನಲ್ಲಿ ಅಡಗಿರುವ ಕೋಪವಿದ್ಯುತ್ತನ್ನು ಹೆಚ್ಚಿಸುವ ವರ್ಷಾಗಮದಂತಿತ್ತು. (೧-೧೪) ಬಂದವಳು ಉದ್ವಿಗ್ನಳಾಗಿದ್ದಳು, ಉದ್ವಿಗ್ನತೆಗೆ ಕಾರಣ;—ಆದಿನ ಪಾಂಚಾಲಿ, ಸುಭದ್ರೆ ಮೊದಲಾದ ಸಪತ್ನಿಯರೊಡನೆ ಅತ್ತೆ ಗಾಂಧಾರಿಯನ್ನು ವಂದಿಸಲಿಕ್ಕೆ ಹೋದಾಗ ಭಾನುಮತಿ 'ಯಾಜ್ಞಸೇನಿ, ನೀನೇಕೆ ನಿನ್ನ ಬಿಚ್ಚಿದ ಕೇಶಗಳನ್ನು ಇನ್ನೂ ಕಟ್ಟಿಲ್ಲ?' ಎಂದು ಪ್ರಶ್ನಿಸಿದ್ದು. ಅವಳ ಕುಟಿಲಪ್ರಶ್ನೆಗೆ ಚೇಟಿಯೇ ಉತ್ತರಿಸಿದ್ದ...

‘ಎಲೌ ಭಾನುಮತಿ, ನಿನ್ನ ಕುರುಳು ಬಿಚ್ಚದೆ ನಮ್ಮ ಒಡತಿ ತನ್ನ ಕುರುಳು ಕಟ್ಟುವುದೆಂತು ?’ ಎಂದು.

ವೇಣೀಸಂಹಾರದ ಬೀಜಾವಾಪ ಇಲ್ಲಿಯೇ ಆರಂಭವಾಯಿತು. ಆಗಲೇ ಭೀಮ

ಚಲಿಪ ಭುಜದೆ ಚಂಡಗದೆಯ ತಿರುಪಿ ತೊಡೆಯ ಜಜ್ಜಿ ನಾಂ
ಕೌರವೇಂದ್ರನಾರ್ದ್ರರಕ್ತದಿಂದ ತೊಯ್ದ ಕೈಗಳಿಂ
ಮಡದಿ ನಿನ್ನ ಕುರುಳ ಸವರಿ ಬಿಗಿವೆ ಕಬರಿಬಂಧಮಂ

ಚಂಚದ್ಭುಜಭ್ರಮಿತ ಚಂಡಗದಾಭಿಘಾತ
ಸಂಚೂರ್ಣಿತೋರುಯುಗಲಸ್ಯ ಸುಯೋಧನಸ್ಯ ।
ಸ್ತ್ಯಾನಾಪವಿದ್ಧ ಘನಶೋಣಿತ ಶೋಣಪಾಣಿ
ರುತ್ತಂಸಯಿಷ್ಯತಿ ಕಚಾಂಸ್ತವ ದೇವಿ ಭೀಮಃ ॥ (೧-೨೧)

ಎಂದು ಅವಳಿಗೆ ಭರವಸೆ ನೀಡಿದ. ಮತ್ತೆ ದ್ರೌಪದಿ ಕಾಣಿಸಿಕೊಳ್ಳುವುದು ನಾಟಕದ ಕಡೆಯಲ್ಲಿ. ಅದೂ ಕಪಟ ಮುನಿ ಚಾರ್ವಾಕನು ಬಂದು ಭೀಮಾರ್ಜುನರ ಮರಣದ ಸುದ್ದಿ ತಿಳಿಸಿದ ಸಂದರ್ಭ. ಯುಧಿಷ್ಠಿರ ದ್ರೌಪದಿಯೊಡನೆ ಅಗ್ನಿಪ್ರವೇಶಸಿದ್ಧತೆ ನಡೆಸಿರುವಾಗ ಪ್ರವೇಶಿಸಿದ ಭೀಮ ದ್ರೌಪದಿಯನ್ನು ಕುರಿತು, ‘ದೇವಿ, ನಿನ್ನ ಮಾನರಕ್ಷಣೆಗಾಗಿ ಮಾಡಿದ ಪ್ರತಿಜ್ಞೆ ಪೂರೈಸಿತು. ದುಶ್ಶಾಸನ ಮತ್ತು ಕೌರವರ ರಕ್ತದಿಂದ ತೊಯ್ದ ಈ ಕೈಗಳಿಂದ ನಾನೇ ನಿನ್ನ ವೇಣೀಸಂಹಾರ ಮಾಡುತ್ತೇನೆ (೬-೪೧) ಎಂದು ಅವಳ ಬಿಡಿಮುಡಿಯನ್ನು ಬಿಗಿದ. ಒಟ್ಟಿನಲ್ಲಿ ಮಹಾಭಾರತ ರಣಕತೆಯ ಕೇಂದ್ರಬಿಂದು ದ್ರೌಪದಿ.

೭) **ಭಾನುಮತಿ :** ಇವಳು ಕೌರವೇಶ್ವರನ ಪಟ್ಟಮಹಿಷಿ, ಪತಿವ್ರತೆ. ಗಂಡನ ಶ್ರೇಯಸ್ಸಿಗಾಗಿ ಹೆಣಗುತ್ತಿದ್ದಳು. ತಾನು ರಾತ್ರಿ ಕಂಡ ಕೆಟ್ಟ ಕನಸಿಗೆ ಉಪಶಾಂತಿ ಕಲ್ಪಿಸಲು ಮುಂಜಾನೆ ಬಾಲೋದ್ಯಾನಕ್ಕೆ ಬಂದಿದ್ದಳು. ಅವಳು ಪೂಜೆಗಾಗಿ ತರಿಸಿದ್ದ ಸಾಮಗ್ರಿಯ ತಟ್ಟೆಯನ್ನು ರಾಜ ಬೀಳಿಸಿ ತನ್ನ ವ್ರತಭಂಗ ಮಾಡಿದರೂ ಅವಳು ಅದಕ್ಕಾಗಿ ರಾಜನ ಮೇಲೆ ಮುನಿಯಲಿಲ್ಲ. ಮೊದಲೇ ದುಃಸ್ವಪ್ನದರ್ಶನದಿಂದ ಬೆದರಿದ ಭಾನುಮತಿ ಪ್ರಚಂಡ ಮಾರುತದ ಆರ್ಭಟಕ್ಕೆ ಹೆದರಿ ಓಡಿಬಂದು ರಾಜನನ್ನಪ್ಪಿದಳು. ಹೇಗೋ ಆದರೂ ಪ್ರಿಯನಿಗೆ ಹಿತವಾಗಿ ನಡೆವುದು ಅವಳ ಧ್ಯೇಯ. ಅದಕ್ಕಾಗಿಯೇ ಭೀಮ ಅವಳ ಬಗ್ಗೆ ಮಾತನಾಡುವಾಗ 'ಹೆಂಗಸರ ಮನಸ್ಸು ಸಹವಾಸದೋಷದಿಂದ ಅವರವರ ಗಂಡಂದಿರ ಗುಣಗಳನ್ನೇ ಅನುಸರಿಸುತ್ತದೆ. ವಿಷವೃಕ್ಷವನ್ನು ಅಪ್ಪಿದ ಮಧುಲತೆ ಕೂಡ ಮೂರ್ಛೆಗೊಳ್ಳುವುದಲ್ಲವೆ'' (೧–೨೦)

ಸತಿಗೆ ಪತಿಯ ಸಾಹಚರ್ಯೆ ಪತಿಯ ಗುಣವ ತಪ್ಪದು
ಮಧುರ ಲತೆಯು ಗರಲ ತರುವನಪ್ಪಿ ಮೂರ್ಛೆಗೊಳ್ಳದೆ ?

ಎಂದ ಮಾತಿನಲ್ಲಿ ಭಾನುಮತಿಗೆ ಕೊಟ್ಟಿರುವ ಮಧುಲತೆಯ ಹೋಲಿಕೆ ಉಚಿತವಾದದ್ದೇ.

ಮುಂದೆ ಜಯದ್ರಥನ ತಾಯಿ ಮತ್ತು ದುಶ್ಶಲೆಯರು ಕೌರವನಲ್ಲಿಗೆ ಬಂದು ಜಯದ್ರಥನನ್ನು ಕೊಲ್ಲುವ ಪ್ರತಿಜ್ಞೆಯ ವಿಷಯ ಪ್ರಸ್ತಾಪಿಸಿದಾಗ ಭಾನುಮತಿ ಕಾಲೋಚಿತವರಿತು ಪತಿಗೆ ಸಲಹೆ ನೀಡಿದಳು. ಅವಳು 'ಆರ್ಯಪುತ್ರ, ತಮ್ಮಂದಿರಲ್ಲಿ

ಯಾರೊಬ್ಬರು ಸತ್ತರೂ ತಾನು ಅಗ್ನಿಪ್ರವೇಶ ಮಾಡುವೆನೆಂದು ಯುಧಿಷ್ಠಿರ ಪ್ರತಿಜ್ಞೆಮಾಡಿರುವನಲ್ಲವೆ?' ಎಂದಳು. ಅದನ್ನು ಕೇಳಿ ಜಯದ್ರಥನ ತಾಯಿಯಿಂದ 'ಹೌದು, ಕಾಲೋಚಿತವಾಗಿ ನುಡಿವಳು ಭಾನುಮತಿ!' ಎಂಬ ಪ್ರಶಸ್ತಿಯೂ ಅವಳಿಗೆ ದೊರೆಯಿತು.

೫. ಮಹಾಭಾರತ ಕಥಾವಸ್ತು–ಭಟ್ಟ ನಾರಾಯಣನ ಕೈವಾಡ

ರಾಮಾಯಣ ಮಹಾಭಾರತದಂತಹ ಪ್ರಾಚೀನ ಇತಿಹಾಸಗಳಿಂದ ಕಥಾವಸ್ತುವನ್ನು ಆರಿಸಿಕೊಂಡು ರೂಪಕವನ್ನಾಗಿಸಿದವರಲ್ಲಿ ಭಾಸ ಮೊದಲನೆಯವನು. ಆತ ರಾಮಾಯಣದಿಂದ ಪ್ರತಿಮಾ ಮತ್ತು ಅಭಿಷೇಕ ನಾಟಕಗಳನ್ನೂ ಮಹಾಭಾರತ ಕಥಾವಸ್ತುವನ್ನು ಅಧಿಕರಿಸಿ ಪಾಂಚರಾತ್ರ, ಮಧ್ಯಮವ್ಯಾಯೋಗ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗಗಳನ್ನೂ ರಚಿಸಿದ್ದಾನೆ. ಇವುಗಳಲ್ಲಿ ಮಹಾಭಾರತದ ಯುದ್ಧಪಂಚಕ ಮುಖ್ಯವಾದರೂ ಆತ ಭೀಷ್ಮಾದಿಪರ್ವಗಳ ಕಥಾವಿಸ್ತಾರಕ್ಕಾಗಿ ಕೆಲವು ಇತರ ಪರ್ವಗಳ ಸಾರವತ್ತಾದ ಭಾಗಗಳನ್ನೂ ಆರಿಸಿಕೊಂಡಿದ್ದಾನೆ. ಉದಾಹರಣೆಗಾಗಿ ಅರಣ್ಯ ಪರ್ವದಿಂದ ಮಧ್ಯಮವ್ಯಾಯೋಗ, ವಿರಾಟಪರ್ವದಿಂದ ಪಾಂಚರಾತ್ರ, ಉದ್ಯೋಗಪರ್ವದಿಂದ ದೂತವಾಕ್ಯ,

ದ್ರೋಣಪರ್ವದಿಂದ ದೂತಘಟೋತ್ಕಚ, ಕರ್ಣಪರ್ವದಿಂದ ಕರ್ಣಭಾರ, ಶಲ್ಯಪರ್ವದಿಂದ ಊರುಭಂಗ.

ಭಾಸನ ತರುವಾಯ ಭಾರತ ಕಥೆಯ ಸಮಗ್ರಚಿತ್ರವನ್ನು ಒಂದೇ ನಾಟಕವಲ್ಲಿ ಸಂಗ್ರಹಿಸಿದ ಯಶಸ್ಸು ಭಟ್ಟನಾರಾಯಣನಿಗೆ ಮೀಸಲು. ಈತ ದ್ರೌಪದಿಯು ದುಶ್ಶಾಸನನಿಂದ ಮುಡಿಹಿಡಿದು ಕೌರವಸಭೆಗೆ ಸೆಳೆಯಲ್ಪಟ್ಟಾಗ ಬಿಚ್ಚಿಹೋದ ವೇಣಿಯನ್ನು, ವನವಾಸಾನಂತರ ಭೀಮನು ದುರ್ಯೋಧನನ ಊರುಭಂಗಮಾಡಿ ರಕ್ತಾರ್ದ್ರವಾದ ತನ್ನ ಕೈಗಳಿಂದ ಅವಳ ಮುಡಿತಡವಿ ಕಟ್ಟುವವರೆಗಿನ ಕಥಾಭಾಗವನ್ನು ಇಲ್ಲಿ ಸಮಾವೇಶಗೊಳಿಸಿದ್ದಾನೆ. ಮಹಾಭಾರತದ ಸಭಾಪರ್ವದಿಂದ ಶಲ್ಯಪರ್ವಾಂತವಾದ ಸಮಗ್ರಕಥಾಭಾಗ ಇಲ್ಲಿ ಬಂದಿದೆ.

ಕಾವ್ಯಭಾಗವನ್ನು ನಾಟಕಕ್ಕೆ ಅಳವಡಿಸುವಾಗ ಮುಖಾದಿ ಪಂಚ ಸಂಧಿಗಳನ್ನು ಮತ್ತು ಸಂಧ್ಯಂಗಗಳನ್ನು ಅಳವಡಿಸಲು ಆತ ಅನೇಕ ಕಲ್ಪಿತ ಪ್ರಸಂಗಗಳನ್ನು ತಂದಿರುವುದು ಅನಿವಾರ್ಯ. ವೇಣೀಸಂಹಾರ ಲಾಕ್ಷಣಿಕರಿಗೆ ಬಹು ಪ್ರಿಯವಾದ ನಾಟಕ. ಏಕೆಂದರೆ ಇದರಲ್ಲಿ ನಾಟಕಲಕ್ಷಣಗಳು ಬಹು ಸಮಂಜಸವಾಗಿ ಬಂದಿವೆ. ವೀರರಸ ಪ್ರಧಾನವಾದ ನಾಟಕದ ಮೊದಲ ಅಂಕದಲ್ಲಿ ಯುಧಿಷ್ಠಿರನ ಉತ್ಸಾಹ ಬೀಜವು ಉಪಕ್ಷಿಪ್ತವಾಗಿರುವುದರಿಂದ 'ಮುಖಸಂಧಿ'ಯೂ, ಎರಡನೆಯ ಅಂಕದಲ್ಲಿ ಆ ಉತ್ಸಾಹಬೀಜ ಭೀಷ್ಮಾದಿಗಳ ವಧೆಯಿಂದ ಚಿಗುರಿದರೂ, ಕರ್ಣ ಮುಂತಾದವರು ಇನ್ನೂ ಬದುಕಿರುವುದರಿಂದ ಪಾಂಡವವಿಜಯವು ಸಂದೇಹ ಗ್ರಸ್ತವಾಗಿರುವುದರಿಂದ 'ಪ್ರತಿಮುಖಸಂಧಿ'ಯೂ, ಮೂರು

ಮತ್ತು ನಾಲ್ಕನೆಯ ಅಂಕಗಳಲ್ಲಿ ದ್ರೋಣ ಮತ್ತು ದುಶ್ಶಾಸನರ ವಧೆಯ ಸೂಚನೆಯಿಂದ ಪಾಂಡವ ವಿಜಯವು ಸ್ಥಿರಪಟ್ಟು 'ಗರ್ಭಸಂಧಿ'ಯೂ, ಮುಂದೆ ಐದನೆಯ ಅಂಕದಲ್ಲಿ ಭೀಮನು ದುರ್ಯೋಧನನನ್ನು ಕೊಲ್ಲುವ ಪ್ರತಿಜ್ಞೆಯಿಂದ ಹಿಡಿದು ಆರನೆಯ ಅಂಕದಲ್ಲಿ ದುರ್ಯೋಧನನ ಊರುಭಂಗ ಮಾಡಿದ ಭೀಮ, ರಕ್ತರಂಜಿತ ಗಾತ್ರನಾಗಿ ಹಿಂದಿರುಗುವವರಗೆ 'ಅವಮರ್ಶ ಸಂಧಿ'ಯೂ, ಕಡೆಯಲ್ಲಿ ಯುಧಿಷ್ಠಿರನ ಪಟ್ಟಾಭಿಷೇಕಾದಿಗಳಲ್ಲಿ ನಿರ್ವಹಣ ಸಂಧಿಯೂ ಏರ್ಪಟ್ಟು ಯುಧಿಷ್ಠಿರನ ಉತ್ಸಾಹವು ಪರಿಪೂರ್ಣಗೊಂಡಿದೆ.

ಮಹಾಭಾರತ ರಣಕಥಾನಾಯಕ ಭೀಮನ ಶೌರ್ಯವೇ ನಾಟಕದುದ್ದಕ್ಕೂ ಎದ್ದು ಕಾಣುತ್ತದೆ. ನಾಟಕ ಪ್ರಾರಂಭದಲ್ಲಿ ಸೂತ್ರಧಾರನ ಉಕ್ತಿಯಲ್ಲಿಯೇ ಕಥಾವಸ್ತುವಿನ ಉಪಕ್ಷೇಪವನ್ನು ಕಾಣುತ್ತೇವೆ. ಸೂತ್ರಧಾರನ ಶರತ್ಸಮಯ ವರ್ಣನವಿದು.

'ತಿಂಗಳು ಬೆಳಕಿನಲ್ಲಿ ಮಿರುಗುವ ತಾರೆಗಳು, ಕ್ರೌಂಚ, ಹಂಸ, ಮೊದಲಾದ ಹಕ್ಕಿಗಳು,' ಕುಶ ಕಾಶ ಕುಸುಮಗಳು. ಬಿಳಿನೈದಿಲೆ ತಾವರೆ ಮುಂತಾದ ಕುಸುಮಗಳಿಂದ ದಿಗಂತಗಳನ್ನು ಬೆಳಗಿಸುವ ಶರತ್ಕಾಲ. 'ಪ್ರಕಾಶಿ'ಸುವ ಪಕ್ಷ ಮತ್ತು ಮಧುರ ಸ್ವರವುಳ್ಳ ಧಾರ್ತರಾಷ್ಟ್ರ(ಹಂಸ)ಗಳು ಕಾಲವಶದಿಂದ ಕೆಳಕೆ ಬೀಳುತ್ತವೆ.

ಸತ್ಪಕ್ಷಾಃ ಮಧುರಗಿರಃ
ಪ್ರಸಾಧಿತಾಶಾ ಮದೋದ್ಧತಾರಂಭಾಃ ।

ನಿಪತಂತಿ ಧಾರ್ತರಾಷ್ಟ್ರಾಃ
ಕಾಲವಶಾನ್ಮೇದಿನೀ ಪೃಷ್ಠೇ (೧.೬)

ಎಂದು ಸೂತ್ರಧಾರ ಧೃತರಾಷ್ಟ್ರಪುತ್ರರ ವಿನಾಶ ಸೂಚಿಸುತ್ತಾನೆ. ಶರತ್ಸಮಯ ವರ್ಣನದಲ್ಲಿ ಹೀಗೆ ಅಕಸ್ಮಾತ್ 'ಅಮಂಗಲೋಕ್ತಿ', ಹೊರಬಿದ್ದುದರಿಂದ ಚಕಿತನಾದ ಅವನ ಉಕ್ತಿಯಿದು.

'ಶತ್ರುಗಳು ನಾಶವಾಗಿ ವಿದ್ವೇಷಾಗ್ನಿ ಉಪಶಮನವಾಗಿದೆ. ಪಾಂಡುಪುತ್ರರು ಮಾಧವನೊಡನೆ ಸುಖವಾಗಿರಲಿ. ನಾಡನ್ನು ಅನುರಾಗ (ರಕ್ತಪ್ರಸಾಧಿತಭುವಃ) ದಿಂದ ಪರಿಪಾಲಿಸುವವರೂ, ಯುದ್ಧವಿಲ್ಲದ (ಕ್ಷತವಿಗ್ರಹಾಃ) ಅಥವಾ ಕತ್ತರಿಸಲ್ಪಟ್ಟ ಶರೀರವುಳ್ಳವರೂ ಆದ ಕೌರವರೂ ಸಹ ಸುಖವಾಗಿರಲಿ; ಇಲ್ಲವೆ (ಸ್ವಸ್ಥಾ ಭವಂತು) ಸ್ವರ್ಗಸ್ಥರಾಗಲಿ'

ನಿರ್ವಾಣವೈರಿದಹನಾಃ ಪ್ರಶಮಾದರೀಣಾಂ
ನಂದಂತು ಪಾಂಡುತನಯಾ ಸಹ ಮಾಧವೇನ ।
ರಕ್ತಪ್ರಸಾಧಿತಭುವಃ ಕ್ಷತವಿಗ್ರಹಾಶ್ಚ
ಸ್ವಸ್ಥಾ ಭವಂತು ಕುರುರಾಜಸುತಾಃ ಸಭೃತ್ಯಾಃ ॥ (೧-೭)

ಎಂಬ ಶ್ಲೇಷೋಕ್ತಿ ಪರ್ಯಾಯವಾಗಿ ಪಾಂಡವರ ಶ್ರೇಯಸ್ಸು ಮತ್ತು ಕೌರವವಿನಾಶಗಳನ್ನು ದೃಢಪಡಿಸುತ್ತದೆ.

ಸೂತ್ರಧಾರನ ಈ ವ್ಯಂಗ್ಯೋಕ್ತಿಯನ್ನು ತೆರೆಯ ಮರೆಯಲ್ಲಿ ಆಲಿಸಿದ ಭೀಮಸೇನ, ಕೌರವನು ತಮಗೆಸಗಿದ ಅಪಚಾರಗಳನ್ನು ಉಲ್ಲೇಖಿಸಿ 'ಹೌದು ಹೌದು! ಲಾಕ್ಷಾಗೃಹದಹನ ಮುಂತಾದ ಅಮಾನುಷ ಅಪಚಾರಗಳನ್ನು ನಮಗೆ ಮಾಡಿದ ಕೌರವರು

ನಾನು ಬದುಕಿರುವಾಗ ಸ್ವಃಸ್ಥರಾಗಿ(ಸುಖವಾಗಿ) ರುವುದೆಂದರೇನು ?' ಎಂದು ಆವೇಶಭರದಲ್ಲಿ ಕ್ರೋಧಾಗ್ನಿಯ ಕಿಡಿಹಾರಿಸುತ್ತಾನೆ. ಪಕ್ಕದಲ್ಲಿದ್ದ ಸಹದೇವ 'ಅಣ್ಣ, ಸ್ವಃಸ್ಥರಾಗುವರು ಎಂದರೆ 'ಸ್ವರ್ಗಸ್ಥರಾಗುವರು' ಎಂದು ಅರ್ಥವಿಸಿ ಅದರ ಆಶಯವನ್ನು ದೃಢಪಡಿಸುವನು.

ಹೀಗೆ ಕವಿ ಭಾರತಕಥೆಯನ್ನು ನಾಟಕರೂಪಕ್ಕೆ ತಿರುಗಿಸುವಾಗ ಮಾಡಿಕೊಂಡಿರುವ ಕೆಲವು ಮಾರ್ಪಾಟುಗಳು ಉಚಿತ. ಮಹಾಭಾರತದ ಉದ್ಯೋಗಪರ್ವದಲ್ಲಿ ಆರಂಭವಾದ ಶ್ರೀಕೃಷ್ಣ ದೌತ್ಯಪ್ರಸಂಗವನ್ನು ಇಲ್ಲಿ ಪ್ರಧಾನವಾಗಿ ಗ್ರಹಿಸಲಾಗಿದೆ. ಸಂಧಿಗಾಗಿ ಕೃಷ್ಣನು ಅಣ್ಣನ ಅಪೇಕ್ಷೆಯಂತೆ ಹೋಗಿರುವನೆಂಬ ಸುದ್ದಿ ಕೇಳಿ ಕಿಡಿಕಿಡಿಯಾದ ಭೀಮ ಅಸಮಾಧಾನಗೊಳ್ಳುತ್ತಾನೆ. ತತ್ರಾಪಿ ಸಂಧಿಯ ಷರತ್ತುಗಳಲ್ಲಿ ಐದು ಗ್ರಾಮಗಳೊಡನೆ ಸಂಧಿ; ಆ ಗ್ರಾಮಗಳು ಕೂಡ ಪಾಂಡವರಿಗೆ ಮರೆಯಲಾಗದ ಅಪಚಾರಗಳನ್ನು ಎಸಗಿದ **ಇಂದ್ರಪ್ರಸ್ಥ, ವೃಕಪ್ರಸ್ಥ, ಜಯಂತ** ಮತ್ತು **ವಾರಣಾವತ,** ಕಡೆಗೆ ಮತ್ತಾವುದಾದರೊಂದು **ಅನಾಮಧೇಯಗ್ರಾಮ**ವೆಂದಮೇಲಂತೂ ಅವನ ಕೋಪ ಗಗನಕ್ಕೇರುತ್ತದೆ. ಹೀಗೆ ಕ್ರಮ ಕ್ರಮವಾಗಿ ಸಂಕ್ರುದ್ಧನಾದ ಅವನು ತನ್ನ ವೀರ ಪ್ರತಿಜ್ಞೆ ಕೈಗೊಳ್ಳುವ ಪ್ರಸಂಗ ನಾಟಕಕಾರನ ಪ್ರತ್ಯುತ್ಪನ್ನ ಮತಿಗೆ ನಿದರ್ಶನ.

ಕ್ರೋಧೋನ್ಮತ್ತನಾದ ವೃಕೋದರ ತನ್ನ ಸಂಕಲ್ಪಸಾಧನೆಗಾಗಿ ಆಯುಧಾಗಾರಕ್ಕೈದ್ದಿ ಆಯುಧಸಹಾಯನಾಗುವೆ

ನೆಂದರೂ ಅವನ ಕಾಲುಗಳು ಅವನಿಗೆ ಅರಿಯದೆಯೇ 'ಕೃಷ್ಣಾ ಸದನ' (ದ್ರೌಪದಿಯ ನೆಲೆವೀಡು)ದ ಕಡೆ ಹಾಯ್ದವು. ಸಹದೇವ ಅದನ್ನು ನೆನಪಿಸಿದ. 'ಕೃಷ್ಣ' ಶಬ್ದ ಶ್ರವಣದಿಂದ ಅವನಿಗೆ ಶ್ರೀಕೃಷ್ಣನು ಸಂಧಿಗೆ ಹೋದ ಪ್ರಸಂಗ ಸ್ಮರಣ, ಅಷ್ಟರಲ್ಲಿ ಭಾನುಮತಿಯಿಂದ ಹೀಯಾಳಿಸಲ್ಪಟ್ಟು ಉದ್ವಿಗ್ನಳಾಗಿ ಎದುರಿಗೆ ಬಂದ ಪಾಂಚಾಲಿಯ ದರ್ಶನ ಮುಂತಾದವು ಕಥೆಯನ್ನು ಮುಂದೆ ಮುಂದೆ ಒಯ್ದು ರೌದ್ರರಸಕ್ಕೆ ಪುಟಕೊಟ್ಟವೆ.

ಈ ಪ್ರಸಂಗ ಕವಿಕಲ್ಪಿತವಾದರೂ ನಾಟಕದ ದೃಷ್ಟಿಯಿಂದ ಅತ್ಯಾವಶ್ಯಕವೆನಿಸಿದೆ.

ಎರಡನೆಯ ಅಂಕದಲ್ಲಿ ಬರುವ 'ನಕುಲದರ್ಶನ' ಪ್ರಸಂಗ ಸಂಪೂರ್ಣ ಕವಿಕಲ್ಪಿತ. ಇದು ಮೊದಲ ಅಂಕದಲ್ಲಿ ಪ್ರಸ್ತಾಪಿಸಿದ ಪ್ರಧಾನ ಪಾತ್ರಗಳೆನಿಸಿದ ಭೀಮ-ದ್ರೌಪದಿಯರ ಪ್ರಸಂಗಕ್ಕೆ ಅನುಗುಣವಾಗಿ ಪ್ರತಿನಾಯಕ-ನಾಯಕಿಯರ ವಿರಸ ಸಂದರ್ಭವನ್ನು ತೋರಿಸಲು ಮಾಡಿಕೊಂಡಿರುವ ಮಾರ್ಪಾಟು, ದುರ್ಯೋಧನನಿಗೆ ಭಾನುಮತಿಯಲ್ಲಿ ಮೂಡಿದ ಅನುರಾಗ ಸಂದರ್ಭ ಅನುಚಿತ. ಅದೂ ಮುಂಜಾನೆ! ತನಗಿಂತ ಮುಂಚೆ ತನಗೆ ಹೇಳದೆ ಬಾಲೋದ್ಯಾನಕ್ಕೆ ಹೋದ ಅವಳನ್ನುಹಿಂಬಾಲಿಸುವುದು, ಮರೆಯಲ್ಲಿ ನಿಂತು ಮಡದಿಯ ಮಾತುಕತೆಯನ್ನು ಕೇಳುವುದು ಹುಡುಗಾಟಿಕೆ; ಮೇಲಾಗಿ ಅವಳ ನುಡಿಗಳಲ್ಲಿನ 'ನಕುಲ' ಶಬ್ದಶ್ರವಣದಿಂದ ಪೂರ್ವಾಪರ ವಿಚಾರಿಸದೆ ಸಂದೇಹ ಪಡುವುದಂತೂ ಅವನ ಎಳಸುಬುದ್ಧಿಗೆ ಓರೆಗಲ್ಲು. ಇವೇ ಮುಂತಾದ ಪ್ರಸಂಗಗಳು ಪ್ರತಿನಾಯಕನಲ್ಲಿನ ಅಯೋಗ್ಯತೆಯನ್ನು

ಕರಿಸಿರುವುದರಿಂದ ಅದಕ್ಕೊಂದು ಔಚಿತ್ಯವನ್ನು ಕಾಣಬಹುದು. ಆದರೆ ನಾಟಕದ ಕಡೆಯಲ್ಲಿ ಬರುವ ಚಾರ್ವಾಕನ ವೃತ್ತಾಂತ ಕವಿಕಲ್ಪಿತವಾದರೂ ಅದು ಅದ್ಭುತರಸವನ್ನು ಪ್ರದರ್ಶಿಸಲು ಯೋಜಿಸಿದ ಕವಿಯ ಅಧಿಕಪ್ರಸಂಗವೆನ್ನದೆ ವಿಧಿಯಿಲ್ಲ.

ಹೀಗೆ ಕವಿ ಮಹಾಭಾರತದ ಕಥೆಯನ್ನು ಆಧಾರವಾಗಿಟ್ಟು ಕೊಂಡು ಕೆಲ ಕೆಲವು ಭಾಗಗಳನ್ನು ಕಲ್ಪಿಸಿಕೊಂಡು ನಾಟಕಕ್ಕೆ ಕಳೆತಂದಿದ್ದಾನೆ.

೬. ರಸಾವಿಷ್ಕಾರ

ಇದರಲ್ಲಿ ಹಾಸ್ಯ ಮತ್ತು ಶಾಂತರಸಗಳ ಹೊರತು ಮಿಕ್ಕ ರಸಗಳು ಅಭಿವ್ಯಕ್ತವಾಗಿವೆ. ಎರಡನೆಯ ಅಂಕದಲ್ಲಿ ಕಾಣುವ ಶೃಂಗಾರ ಸತಿಪತಿ ಸಂಬಂಧವಾದ್ದರಿಂದ ಉಚಿತವೆನಿಸಿದರೂ ಅದು ಅಸಾಮಯಿಕ; ಆದ್ದರಿಂದ ರಸಾಭಾಸವೇ ಆಗುತ್ತದೆ. ಮೂರನೆಯ ಅಂಕದಲ್ಲಿ ಕರುಣ, ಬೀಭತ್ಸ ಮತ್ತು ರೌದ್ರರಸ ಗಳೂ, ನಾಲ್ಕನೆಯ ಅಂಕದಲ್ಲಿ ಭಯಾನಕವೂ ಆರನೆಯ ಅಂಕ ದಲ್ಲಿ ಅದ್ಭುತರಸವೂ ಅಭಿವ್ಯಕ್ತವಾಗಿವೆ. ನಿದರ್ಶನಕ್ಕಾಗಿ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

ರೌದ್ರ: ಯುಧಿಷ್ಠಿರ ಐದು ಗ್ರಾಮಗಳೊಡನೆ ಸಂಧಿ ಮಾಡಿಕೊಳ್ಳುವುದನ್ನು ಕೇಳಿದ ಭೀಮನ ಪ್ರತಿಕ್ರಿಯೆ ಇದು :—

ಮಥ್ನಾಮಿ ಕೌರವಶತಂ ಸಮರೇ ನ ಕೋಪಾತ್
ದುಶ್ಶಾಸನಸ್ಯ ರುಧಿರಂ ನ ಪಿಬಾಮ್ಯುರಸ್ತಃ।

ಸಂಚೂರ್ಣಯಾಮಿ ಗದಯಾ ನ ಸುಯೋಧನೋರೂ
ಸಂಧಿಂ ಕರೋತು ಭವತಾಂ ನೃಪತಿಃ ಪಣೇನ॥ (೧-೧೫)

'ಆದೀತು ಐದು ಗ್ರಾಮಗಳೊಡನೆ ಸಂಧಿ! ಹುಂ, ಒಮ್ಮೆ ನಾನು ಕೋಪವ್ಯಗ್ರನಾಗಿ ರಣರಂಗದಲ್ಲಿ ನೂರ್ವರು ಕೌರವರನ್ನು ಮರ್ದಿಸದಿದ್ದರೆ, ದುಶ್ಶಾಸನನ ಎದೆಯನ್ನು ಸೀಳಿ ಬಿಸಿನೆತ್ತರನ್ನು ಹೀರದಿದ್ದರೆ ಅಥವಾ ಸುಯೋಧನನ ಊರುವನ್ನು ಗದೆಯಿಂದ ಪುಡಿ ಪುಡಿ ಮಾಡದಿದ್ದರೆ ಆಗ ನಿಮ್ಮ ರಾಜನು ಬೇಕಾದರೆ ಸಂಧಿ ಮಾಡಿಕೊಳ್ಳಲಿ!'

ಕೃತಮನುಮತಂ ದೃಷ್ಟಂ ವಾ ಯೈರಿದಂ ಗುರುಪಾತಕಂ
ಮನುಜಪಶುಭಿರ್ನಿರ್ಮರ್ಯಾದೈರ್ಭವದ್ಭಿರುದಾಯುಧೈಃ।
ನರಕರಿಪುಣಾ ಸಾರ್ಧಂ ತೇಷಾಂ ಸಭೀಮಕಿರೀಟನಾ
ಮಯಮಹಮಸೃಜ್ಮೇದೋಮಾಂಸೈಃ ಕರೋಮಿ ದಿಶಾಂ ಬಲಿಮ್ ॥
(೩-೨೪)

ಈ ಗುರು ಘಾತರೂಪವಾದ ಪಾತಕವನ್ನು ಯಾರು ಮಾಡಿದರೋ, ಅದನ್ನು ಯಾರು ಕಂಡರೋ, ಯಾರು ಇದಕ್ಕೆ ಅನುಮತಿ ಕೊಟ್ಟರೋ ಅಂಥ ನರಪಶುಗಳೂ, ಆಯುಧಧಾರಿಗಳೂ ಮರ್ಯಾದೆಯಿಲ್ಲದವರೂ ಆದ ನೀವು, ನರಕರಿಪು ಶ್ರೀ ಕೃಷ್ಣನೂ ಸೇರಿ, ಭೀಮ ಕಿರೀಟಿ ಮುಂತಾದ ನಿಮ್ಮೆಲ್ಲರ ಮಾಂಸ ಮಜ್ಜಾದಿಗಳಿಂದ ದಿಗ್ಬಲಿ ಕೊಡುತ್ತೇನೆ. ಇಲ್ಲಿ ರೌದ್ರರಸವ್ಯಂಜನಕ್ಕೆ ತಕ್ಕ ಶೈಲಿಯಿಲ್ಲದುದು ಕವಿಯ ಅಸಮರ್ಥತೆಯೆಂದು ವಿಮರ್ಶಕರು ಆಕ್ಷೇಪಿಸಿದ್ದಾರೆ. (ಕಾವ್ಯ ಪ್ರಕಾಶ ೪-೩೯)

ಕರುಣ: ಕರ್ಣಾವಸಾನವನ್ನು ಕೇಳಿ ಪರಿತಪಿಸುತ್ತಿದ್ದ ದುರ್ಯೋಧನನ ತಂದೆತಾಯಿಗಳು ಬಂದ ಸುದ್ದಿ ಕೇಳಿದಾಗ,

ಅದ್ಯೈವಾವಾಂ ರಣಮುಪಗತೌ ತಾತಮಂಬಾಂ ಚ ದೃಷ್ಟ್ವಾ
ಘ್ರಾತಸ್ತಾಭ್ಯಾಂ ಶಿರಸಿ ವಿನತೋಽಹಂ ಚ ದುಶ್ಶಾಸನಶ್ಚ ।
ತಸ್ಮಿನ್ ಬಾಲೇಃ ಪ್ರಸಭಮರಿಣಾ ಪ್ರಾಪಿತೇ ತಾಮವಸ್ಥಾಂ
ಪಾರ್ಶ್ವಂ ಪಿತ್ರೋರಪಗತಘೃಣಃ ಕಿಂ ನು ವಕ್ಷ್ಯಾಮಿ ಗತ್ವಾ ॥
(೪-೧೫)

'ಅಯ್ಯೋ, ಇಂದು ಬೆಳಿಗ್ಗೆ ದುಶ್ಶಾಸನನೊಂದಿಗೆ ತಂದೆ ತಾಯಿಗಳನ್ನು ವಂದಿಸಿದ್ದೆ. ಅವರು ತಲೆಮೂಸಿ ಇಬ್ಬರನ್ನೂ ಹರಸಿ ಕಳುಹಿಸಿದ್ದರು. ಈಗ ಅವರು ದುಶ್ಶಾಸನನೆಲ್ಲಿ? ಎಂದರೆ ಏನು ಹೇಳಲಿ? ದುಶ್ಶಾಸನನಿಗಾದ ದುರಂತ ಕತೆಯನ್ನು ಏನೆಂದು ಹೇಳಲಿ?'

ಅದ್ಭುತ: ಭೀಮನು ದುರ್ಯೋಧನನ ಊರುಭಂಗ ಮಾಡಿ ಹಿಂದಿರುಗಿ ಬಂದಾಗ ಯುಧಿಷ್ಠಿರ ಚಾರ್ವಾಕನ ಮಾತಿನಂತೆ ಅವನನ್ನು ದುರ್ಯೋಧನನೆಂದು ಬಗೆದು ಬಾಹುಗಳಿಂದ ಬಿಗಿದಪ್ಪಿ ಹೇಳುವ ಮಾತು:—

ಆಶೈಶವಾದನುದಿನಂ ಜನಿತಾಪರಾಧೋ
ಮತ್ತೋ ಬಲೇನ ಭುಜಯೋರ್ಹತರಾಜಪುತ್ರಃ ।
ಆಸಾದ್ಯ ಮೇಽನ್ತರಮಿದಂ ಭುಜಪಂಜರಸ್ಯ
ಜೀವನ್ಪ್ರಯಾಸಿ ನ ಪದಾತ್ಪದಮದ್ಯ ಪಾಪಃ ॥ (೬-೩೮)

'ಎಲೈ ಸುಯೋಧನಹತಕ, ಚಿಕ್ಕಂದಿನಿಂದಲೂ ಪ್ರತಿ ದಿನವೂ ಅನೇಕ ಅಪರಾಧಗಳನ್ನು ಮಾಡಿ ಭುಜಬಲದಿಂದ ಮದಿಸಿರುವೆ. ಮೇಲಾಗಿ ಭೀಮ ಮೊದಲಾದ ರಾಜಪುತ್ರರನ್ನು ಕೊಂದಿರುವ ನೀನು ಇಂದು ನನ್ನ ಭುಜಪಂಜರದಲ್ಲಿ ಸಿಕ್ಕಿಬಿದ್ದಿದ್ದೀಯೆ! ಈಗ ನೀನು ಇಲ್ಲಿಂದ ಬದುಕಿ ಒಂದು ಹೆಜ್ಜೆಯನ್ನೂ ಮುಂದಿಡಲಾರೆ!'

ಭಯಾನಕ: ಎರಡನೆಯ ಅಂಕದಲ್ಲಿ ಭಾನುಮತಿ ನೇಪಥ್ಯದಲ್ಲಿನ ಭಯಂಕರ ಕಲಕಲವನ್ನು ಕೇಳಿ ಭಯಚಕಿತಳಾಗಿ ಬಂದು ಕುರುಪತಿಯನ್ನಪ್ಪಿದಾಗ, ದುರ್ಯೋಧನ ಅವಳನ್ನು ಸಂತೈಸಿ ಚಂಡಮಾರುತವನ್ನು ಬಣ್ಣಿಸುತ್ತಾನೆ.

ದಿಕ್ಷು ವ್ಯೂಢಾಂಘ್ರಿಪಾಂಗಸ್ತೃಣಜಟಿಲಚಲತ್ಪಾಂಸುದಂಡೋಽನ್ತರಿಕ್ಷೇ
ಝಂಕಾರೀ ಶರ್ಕರಾಲಃ ಪಥಿಷು ವಿಟಪಿನಾಂ ಸ್ಕಂಧಕಾಷೈಸ್ಸಧೂಮಃ।
ಪ್ರಾಸಾದಾನಾಂ ನಿಕುಂಜೇಷ್ವಭಿನವಜಲದೋದ್ಗಾರಗಂಭೀರಧೀರ
ಶ್ಚಂಡಾರಂಭಃ ಸಮೀರೋ ವಹತಿ ಪರಿದಿಶಂ ಭೀರು ಕಿಂ ಸಂಭ್ರಮೇಣ ॥
(೨-೧೯)

'ಎಲೌ ಭೀರು, ಏಕೆ ಹೆದರುವೆ? ಇಂಥ ಚಂಡಮಾರುತವು ದಿಕ್ಕುದಿಕ್ಕಿನಲ್ಲಿಯೂ ಬೀಸುತ್ತಿದೆ.. ಎಲ್ಲದಿಕ್ಕುಗಳಲ್ಲಿರುವ ಮರಗಳನ್ನು ವ್ಯಾಪಿಸಿ, ಗಗನದಲ್ಲಿ ದಂಡಾಕಾರವಾಗಿ ಧೂಳನ್ನೆಬ್ಬಿಸಿ ಕಸ ಕಡ್ಡಿಗಳಿಂದ ಜಟಿಲವಾಗಿಯೂ, ಬೀದಿಗಳಲ್ಲಿ ಭಯಂಕರ ಶಬ್ದ ಮಾಡುತ್ತಾ ಮರದ ಕೊಂಬೆಗಳ ಪರಸ್ಪರ ಘರ್ಷಣದಿಂದ ಹೊಗೆಯನ್ನೆಬ್ಬಿಸುತ್ತಿರುವ ಮತ್ತು ಮಹಡಿಗಳ ಮೇಲೆ ನವಮೇಘ ಜಾಲದಂತೆ ಗಂಭಿರವಾಗಿ ಬೀಸುತ್ತಿರುವ ಬಿರುಗಾಳಿಯಿದು'

ಬೀಭತ್ಸ: ಐದನೆಯ ಅಂಕದಲ್ಲಿ ಗಾಂಧಾರೀ ಧೃತರಾಷ್ಟ್ರರ ಸಮಕ್ಷ ದುರ್ಯೋಧನನನ್ನು ಮೂದಲಿಸುವಾಗ ಭೀಮನ ಉಕ್ತಿ

ಪೀನಾಭ್ಯಾಂ ಮದ್ಭುಜಾಭ್ಯಾಂ ಭ್ರಮಿತಗುರುಗದಾಘಾತಸಂಚೂರ್ಣಿ
ತೋರೋಃ
ಕ್ರೂರಸ್ಯಾಧಾಯ ಪಾದಂ ತವ ಶಿರಸಿ ನೃಣಾಂ ಪಶ್ಯತಾಂ ಶ್ವಃ ಪ್ರಭಾತೇ
ತ್ವನ್ಮುಖ್ಯಭ್ರಾತೃಚಕ್ರೋದ್ದಲನಗಲದಸೃಕ್ಚಂದನೇನಾನಖಾಗ್ರಂ
ಸ್ತ್ಯಾನೇನಾರ್ದ್ರೇಣ ಚಾಕ್ತಃ ಸ್ವಯಮನುಭವಿತಾ ಭೂಷಣಂ
ಭೀಮಮುಸ್ಮಿ॥ (೫-೩೫)

'ಎಲೈ ದುರಾತ್ಮನ್, ನಾಳೆ ಬೆಳಗಾಗುವುದೇ ತಡ, ಎಲ್ಲ ರಾಜರೂ ನೋಡುತ್ತಿದ್ದಂತೆಯೇ ನನ್ನ ಎರಡೂ ಕೊಬ್ಬಿದ ಭುಜಗಳಿಂದ ತಿರುಗಿಸಿ ಹೊಡೆದ ಬೃಹದ್ಗದಾಘಾತದಿಂದ ತೊಡೆ ಮುರಿದು ಬಿದ್ದಿರುವ ಕ್ರೂರಿಯಾದ ನಿನ್ನ ತಲೆಯ ಮೇಲೆ ಕಾಲನ್ನಿಟ್ಟು, ನೀನೇ ಮೊದಲಾದ ನಿನ್ನ ಸಹೋದರ ಚಕ್ರವನ್ನೇ ಸದೆಬಡಿದದ್ದರಿಂದ ಹೊರಟ ಹಸಿಯ ರಕ್ತವೆಂಬ ಚಂದನವನ್ನು ನಖಶಿಖಾಂತವಾಗಿ ಮೈಗೆ ಲೇಪಿಸಿ ಕೊಂಡು ಸ್ವಯಂ ಭಯಂಕರನಾದ ನಾನು, ಅದನ್ನೇ ಭೂಷಣವೆಂದು ಭಾವಿಸವೆನು.'

ಪ್ರಥಮಾಂಕದ ಕಡೆಯಲ್ಲಿ ಭೀಮನು ದ್ರೌಪದಿಗೆ ಪಾಂಡವರ ಯುದ್ಧಕೌಶಲವನ್ನು ಸೂಚಿಸುವ ಬಗೆ ಬೀಭತ್ಸ ರಸಕ್ಕೆ ಉತ್ತಮ ಉದಾಹರಣೆ—

ಅನ್ಯೋನ್ಯಾಸ್ಫಾಲಭಿನ್ನದ್ವಿಪರುಧಿರವಸಾಮಾಂಸಮುಸ್ತಿಷ್ಕಪಂಕೇ
ಮಗ್ನಾನಾಂ ಸ್ಯಂದನಾನಾಮುಪರಿಕೃತಪದನ್ಯಾಸವಿಕ್ರಾಂತಪತ್ತೌ।

ಸ್ಫೀತಾಸೃಕ್ಪಾನಗೋಷ್ಠೀರಸದಶಿವಶಿವಾತೂರ್ಯನೃತ್ಯತ್ಕಬಂಧೇ
ಸಂಗ್ರಾಮೈಕಾರ್ಣವಾಂತಃಪಯಸಿ ವಿಚರಿತುಂ ಪಂಡಿತಾಃ
ಪಾಂಡುಪುತ್ರಾಃ || (೧-೨೭)

ಪರಸ್ಪರ ಸಂಘರ್ಷದಿಂದ ಜಜ್ಜಿಹೋದ ಆನೆಗಳ, ಮಾಂಸ ಮಜ್ಜ,ರುಧಿರ ಮತ್ತು ಮೇಧಸ್ಸುಗಳ ಕೆಸರಿನಲ್ಲಿ ಮುಳುಗಿಹೋದ ರಥಗಳ ಮೇಲೆ ನಡೆದಾಡುವುದರಲ್ಲಿ ಸಮರ್ಥರಾದ ಕಾಲಾಳು ಗಳುಳ್ಳ ಮತ್ತು ಅತ್ಯಧಿಕ ರಕ್ತಪಾನಮಾಡುವ ಗೋಷ್ಠಿಗಳಲ್ಲಿ ಅಮಂಗಳಕರವಾಗಿ ಧ್ವನಿಮಾಡುತ್ತಿರುವ ಗುಳ್ಳೆನರಿಗಳ ತೂರ್ಯಕ್ಕೆ ನರ್ತಿಸುತ್ತಿರುವ ಮುಂಡಗಳುಳ್ಳ ಸಂಗ್ರಾಮ ಸಾಗರದ ಅಂತರ್ಜಲದಲ್ಲಿ ಸಂಚರಿಸುವುಕ್ಕೆ ಪಾಂಡುಪುತ್ರರು ಪಂಡಿತರೇ ಆಗಿದ್ದಾರೆ.

ವೀರರಸಕ್ಕೆ ಸಾಕಷ್ಟು ಉದಾಹರಣೆಗಳು ಮೊದಲ ಅಂಕದಲ್ಲಿಯೇ ಇವೆ. ಇತರ ವರ್ಣನಗಳೂ ಅಲ್ಲಲ್ಲಿ ಮನೋಜ್ಞ ವಾಗಿ ಬಂದಿವೆ.

ಪ್ರಾತಃಕಾಲ : ಬಗೆ ಬಗೆಯ ಹೂಗಳು ಅರಳಿದ್ದವು. ತಂಗಾಳಿ ಸೂಸುತ್ತಿತ್ತು. ಹಿಮಮಿಶ್ರಿತವಾದ ಮಕರಂದ ಕುಸುಮಗಳಿಂದ ಹೊರಸೂಸುತ್ತಿತ್ತು. ಇರುಳಿನಿಂದ ಎಚ್ಚತ್ತ ಕಮಲ ಮೊಗ್ಗೆಗಳು ಬೆಳಗಿನ ಅರುಣ ಕಿರಣಗಳಿಂದ ಅರಳಿದ್ದವು. ಅವುಗಳ ಸೌರಭ ದುಂಬಿಗಳನ್ನು ಆಕರ್ಷಿಸುತ್ತಿತ್ತು. ಅವು ಕಮಲ ರಸಾಸ್ವಾದನೆಗಾಗಿ ಹಾತೊರೆಯುತ್ತಿದ್ದವು.

ಪ್ರಾಲೇಯಮಿಶ್ರಮಕರಂದಕರಾಲಕೋಶೈಃ
ಪುಷ್ಪೈಃ ಸಮಂ ನಿಪತಿತಾ ರಜನೀಪ್ರಬುದ್ಧೈಃ।
ಅರ್ಕಾಂಶುಭಿನ್ನಮುಕುಲೋದರಸಾಂದ್ರಗಂಧ
ಸಂಸೂಚಿತಾನಿ ಕಮಲಾನ್ಯಲಯಃ ಪತಂತಿ॥ (೨-೭)

೭. ಶೈಲಿ

ಓಜಃಪೂರ್ಣವಾದುದು ಭಟ್ಟನಾರಾಯಣನ ಶೈಲಿ. ಅದು ವೀರ ರೌದ್ರ ರಸಗಳಿಗೆ ಅನುಗುಣವೇ ಆಗಿದೆ. ದೀರ್ಘಸಮಾಸ ಭೂಯಿಷ್ಠವಾದ ಗೌಡ ಶೈಲಿಗೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ಮಂಥಾಯಾಸ್ತಾರ್ಣವಾಂಭಃ ಪ್ಲುತಕುಹರಚಲನ್ಮಂದರಧ್ವಾನಧೀರಃ
ಕೋಣಾಘಾತೇಷು ಗರ್ಜತ್ಪ್ರಲಯಘನಘಟಾನ್ಯೋನ್ಯ
ಸಂಘಟ್ಟಚಂಡಃ।
ಕೃಷ್ಣಾಕ್ರೋಧಾಗ್ರದೂತಃ ಕುರುಕುಲನಿಧನೋತ್ಪಾತನಿರ್ಘಾತ
ವಾತಃ
ಕೇನಾಸ್ಮತ್ಸಿಂಹನಾದಪ್ರತಿರಸಿತಸಖೋ ದುಂದುಭಿಸ್ತಾಡಿ
ತೋಽಯಮ್॥ (೧-೨೨)

ಶ್ರೀ ಕೃಷ್ಣನ ಬಗೆಗೆ ಭೀಮನು ಭಕ್ತಿಪೂರ್ಣವಾಗಿ ನುಡಿವ ಶೈಲಿಯ ಪ್ರಸನ್ನತೆಗೆ ಇದೊಂದು ಉದಾಹರಣೆ ಸಾಕು—

ಆತ್ಮಾರಾಮಾ ವಿಹಿತರತಯೋ ನಿರ್ವಿಕಲ್ಪೇ ಸಮಾಧೌ
ಜ್ಞಾನೋತ್ಸೇಕಾದ್ವಿಘಟಿತತಮೋಗ್ರಂಥಯಃ ಸತ್ತ್ವನಿಷ್ಠಾಃ।
ಯಂ ವೀಕ್ಷಂತೇ ಕಮಪಿ ತಮಸಾಂ ಜ್ಯೋತಿಷಾಂ ವಾ ಪರಸ್ತಾ
ತ್ತಂ ಮೋಹಾಂಧಃ ಕಥಮಹಮಮುಂ ವೇತ್ತಿ ದೇವಂ
ಪುರಾಣಮ್॥ (೧-೨೩)

ಅಶ್ವತ್ಥಾಮನ ಆಟೋಪ:

ಮಹಾಪ್ರಲಯಮಾರುತಕ್ಷುಭಿತಪುಷ್ಕರಾವರ್ತಕ-
ಪ್ರಚಂಡ ಘನಗರ್ಜಿತ ಪ್ರತಿರವಾನುಕಾರೀ ಮುಹುಃ।
ರವಃ ಶ್ರವಣಭೈರವಃ ಸ್ಥಗಿತರೋದಸೀಕಂದರಃ
ಕುತೋಽದ್ಯ ಸಮರೋದಧೇರಯಮಭೂತಪೂರ್ವಃ
ಪುರಃ ॥ (೩-೪)

ಕರ್ಣನನ್ನು ಧಿಕ್ಕರಿಸಿದ ಅಶ್ವತ್ಥಾಮನ ಉಕ್ತಿಗಳು—

೧. ಅರೇ ರೇ ರಾಧಾಗರ್ಭಭಾರಭೂತ, ಸೂತಾಪಸದ, ಮಮಾಪಿ ನಾಮಾಶ್ವತ್ಥಾಮ್ನೋ ದುಃಖಿತಸ್ಯಾಶ್ರುಭಿಃ ಪ್ರತಿಕ್ರಿಯಾಮುಪದಿಶಸಿ ನ ಶಸ್ತ್ರೇಣ.

೨. ಅರೇ ರೇ ರಥಕಾರಕುಲಕಲಂಕ, ಅರೇ ರಾಧಾಗರ್ಭಭಾರಭೂತ, ಆಯುಧಾನಭಿಜ್ಞ, ತಾತಮಪ್ಯಧಿಕ್ಷಿಪಸಿ ।

೩. ದುರಾತ್ಮನ್, ರಾಜವಲ್ಲಭ, ಪ್ರಗಲ್ಭ, ಸೂತಾಪಸದ, ಅಸಂಬದ್ಧ ಪ್ರಲಾಪಿನ್,

ಕಥಮಪಿ ನ ನಿಷಿದ್ಧೋ ದುಃಖಿನಾ ಭೀರುಣಾ ವಾ
ದ್ರುಪದತನಯಪಾಣಿಸ್ತೇನ ಪಿತ್ರಾ ಮಮಾದ್ಯ ।
ತವ ಭುಜಬಲದರ್ಪಾಧ್ಮಾಯಮಾನಸ್ಯ ವಾಮಃ
ಶಿರಸಿ ಚರಣ ಏಷ ನ್ಯಸ್ಯತೇ ವಾರಯೈನಮ್ ॥ (೩-೪೦)

ರಣರಂಗದಿಂದ ಕರ್ಣ ರಾಜನಿಗೆ ಬರೆದುಕಳುಹಿಸಿದ ಪಟಚೀರ (ಹರಿದ ಬಟ್ಟೆಯಚೂರು) ಲಿಖಿತ ರಕ್ತಾಕ್ಷರ ಪತ್ರದಲ್ಲಿನ ಕರುಣರಸಸ್ರಾವಿಯಾದ ಮೋಹಕ ಶೈಲಿ:—

ಅಸ್ತ್ರಗ್ರಾಮವಿಧೌ ಕೃತೀ ನ ಸಮರೇಷ್ವಸ್ಯಾಸ್ತಿ ತುಲ್ಯಃ ಪುಮಾನ್
ಭ್ರಾತೃಭ್ಯೋಽಪಿ ಮಮಾಧಿಕೋಽಯಮಮುನಾ ಜೇಯಾಃ
ಪೃಥಾಸೂನವಃ ।
ಯತ್ಸಂಭಾವಿತ ಇತ್ಯಹಂ ನ ಚ ಹತೋ ದುಶ್ಶಾಸನಾರಿರ್ಮಯಾ
ತಂ ದುಃಖಪ್ರತಿಕಾರಮೇಹಿ ಭುಜಯೋರ್ವೀರ್ಯೇಣ ಬಾಷ್ಪೇಣ ವಾ॥
(೪-೧೨)

ರಣರಂಗದಿಂದ ಕರ್ಣನು ಮಹಾರಾಜ ದುರ್ಯೋಧನ ನನ್ನು ಕಂಠಗಾಢಾಲಿಂಗನ ಪೂರ್ವಕ ಬಿನ್ನವಿಸುತ್ತಿದ್ದಾನೆ:—

ಈ ಕರ್ಣ ಶಸ್ತ್ರವಿದ್ಯಾಪ್ರವೀಣ, ಸಮರಗಳಲ್ಲಿ ಇವನಿಗೆ ಸಮರಿಲ್ಲ. ಇವನು ಭ್ರಾತೃಗಳಿಗಿಂತ ತನಗಿಂತ ಅಧಿಕ, ಇವನಿಂದ ಪಾಂಡವರನ್ನು ಗೆಲ್ಲಬಹುದು ಎಂದು ನೀನು ಗುಣಾಕಾರ ಹಾಕಿ ಕೊಂಡಿದ್ದೆ. ಆದರೆ ಆ ದುಶ್ಶಾಸನಶತ್ರುವನ್ನು ನಾನು ಕೊಲ್ಲಲಿಲ್ಲ; ಅಂಥ ಭ್ರಾತೃವಿಯೋಗದುಃಖಕ್ಕೆ ಭುಜಬಲದಿಂದ ಲಾಗಲಿ,ಇಲ್ಲವೆ ಕಣ್ಣೀರಿನಿಂದಾಲಿ ನೀನೇ ಪ್ರತೀಕಾರ ಮಾಡು !

ಎಂಬ ಮಾತುಗಳು ರಸಾನುಗುಣವಾಗಿ ಹೃದಯಂಗಮ ವಾಗಿ ಹೊರಟಿವೆ.

ವೇಣೀ ಸಂಹಾರದಲ್ಲಿನ ಅನೇಕ ಪದ್ಯಗಳನ್ನು ಮಮ್ಮಟನು ಅಲ್ಲಲ್ಲಿ ಉಲ್ಲೇಖಿಸಿ ದೋಷೋದ್ಘಾಟನ ಮಾಡಿದ್ದಾನೆ. ಗೃಹೀತಂ ಯೇನಾಸೀಃ (೩-೧೯) ಎಂಬಲ್ಲಿ ನಿರ್ಹೇತುತ್ವ, ಮಹಾಪ್ರಲ ಯಮಾರುತಕ್ಷುಭಿತ ಎಂಬಲ್ಲಿ ಪ್ರಯೋಗಿಸಿರುವ 'ರವಃ' ಎಂಬ ಪದವು ಮಂಡೂಕಾದಿರವ ಬೋಧಕವೇ ಹೊರತು 'ಸಿಂಹನಾದ' ಎಂಬ ಅರ್ಥದಲ್ಲಿಲ್ಲ ಇತ್ಯಾದಿ.

೮. ನುಡಿಗಟ್ಟುಗಳು

೧. ಪರ್ಯಾಯೇಣ ಹಿ ದೃಶ್ಯಂತೇ ಸ್ವಪ್ನಾಃ ಕಾಮಂ ಶುಭಾಶುಭಾಃ (೨.೧೪)

ಕನಸುಗಳು ಒಮ್ಮೊಮ್ಮೆ ಶುಭವೂ ಆಗಬಹುದು ಅಶುಭವೂ ಆಗಬಹುದು.

೨. ಯಾವದಯಂ ಸಂಸಾರಸ್ತಾವತ್ಪ್ರಸಿದ್ಧೈವೇಯಂ ಲೋಕಯಾತ್ರಾ ಯತ್ಪುತ್ರೈಃ ಪಿತರೋ ಲೋಕದ್ವಯೇಽಪ್ಯನುವರ್ತನೀಯಾ ಇತಿ (ಅಂ. ೩)

ಈ ಸಂಸಾರವಿರುವವರೆಗೆ ಮಕ್ಕಳು ಇಹದಲ್ಲಿಯೂ ಪರದಲ್ಲಿಯೂ ತಂದೆ ತಾಯಿಗಳನ್ನು ಅನುಸರಿಸಿ ನಡೆಯಬೇಕು ಎಂಬುದು ಪ್ರಸಿದ್ಧವಷ್ಟೆ!

೩. ತೇಜಸ್ವೀ ರಿಪುಹತಬಂಧುದುಃಖಪಾರಂ ।
ಬಾಹುಭ್ಯಾಂ ವ್ರಜತಿ ಧೃತಾಯುಧಪ್ಲವಾಭ್ಯಾಮ್ ॥
(೩.೨೭)

ವೀರಪುರುಷನು ರಿಪುಹತರಾದ ಬಂಧುಗಳಿಂದ ಉಂಟಾದ ಶೋಕಸಾಗರವನ್ನು ಆಯುಧ ಹಿಡಿದ ಬಾಹುವೆಂಬ ಹಡಗುಗಳಿಂದಲೇ ದಾಟುತ್ತಾನೆ.

೪. ನ ಘಟಸ್ಯ ಕೂಪಪತನೇ ರಜ್ಜುಸ್ತತ್ರೈವ ಪ್ರಕ್ಷೇಪ್ತವ್ಯಾ
(ಅಂ. ೫)

ಕೊಡವು ಭಾವಿಯಲ್ಲಿ ಬೀಳಲು ಹಗ್ಗವನ್ನು ಅಲ್ಲಿಯೇ ಎಸೆಯಬಾರದಷ್ಟೆ!

೫. ಯಾವತ್ಪ್ರಾಣಿತಿ ತಾವದುಪದೇಷ್ಟವ್ಯಭೂಮಿರ್ವಿಜಿಗೀಷುಃ ಪ್ರಜ್ಞಾವತಾಮ್। (ಅಂ-೫)

ಜಯಾಕಾಂಕ್ಷಿಗಳಾದ ಅರಸರಿಗೆ ಜೀವಿಸಿರುವವರೆಗೆ ಪ್ರಜ್ಞಾಶಾಲಿಗಳು ಉಪದೇಶಿಸಬೇಕು.

೬. ನ ಯುಕ್ತಮನಭಿವಾದ್ಯ ಗೂರೂನ್ ಗಂತುಂ ಸ್ವಯಂವಿಶ್ರಾವ್ಯ ನಾಮ ಕರ್ಮಣೀ ವಂದನೀಯಾ ಗುರವಃ (ಅಂ.೫)

ಗುರುಹಿರಿಯರಿಗೆ ಅಭಿವಂದಿಸದೆ ಮುನ್ನಡೆಯಬಾರದು. ತಮ್ಮ ಹೆಸರು ಮತ್ತು ಕೃತಿಗಳೆರಡನ್ನೂ ಅವರಿಗೆ ಅರಕೆ ಮಾಡಿ ವಂದಿಸಬೇಕು

೭. ಯುಧಿಷ್ಠಿರನಿಗೆ ಕಪಟಮುನಿ ರಾಕ್ಷಸನ ಮಾತು–

ನಯುಕ್ತಂ ಬಂಧುವ್ಯಸನಂ ವಿಸ್ತರೇಣಾವೇದಯಿತುಂ (ಅಂ.೬)

ಬಂಧುವ್ಯಸನದ ಸುದ್ದಿಯನ್ನು ವಿಸ್ತರಿಸಿ ಹೇಳಬಾರದು.

೮. ಕರ್ಣ ಅಶ್ವತ್ಥಾಮನಿಗೆ ಹೇಳುವ ಮಾತು.

ಪ್ರಕೃತಿರ್ದುಸ್ತ್ಯಜಾ ನಾಮ! (ಅಂ. ೩)

ಸ್ವಭಾವವೆಂಬುದು ಬಿಡತಕ್ಕುದಲ್ಲ.

೯. ದೈವಾಯತ್ತಂ ಕುಲೇ ಜನ್ಮ ಮದಾಯತ್ತಂತು ಪೌರುಷಮ್ (ಅಂ. ೩)

ಉತ್ತಮ ಕುಲದಲ್ಲಿ ಹುಟ್ಟುವುದು ದೈವಾಧೀನ. ಪೌರುಷ ನನ್ನ ಅಧೀನ.

೧೦. ಅಶ್ವತ್ಥಾಮನ ಮಾತು :—

ಸತ್ಯಾದಪ್ಯನೃತಂ ಶ್ರೇಯೋ ಧಿಕ್ಸ್ವರ್ಗಂ ನರಕೋಽಸ್ತು ಮೇ ।
ಭೀಮಾದ್ದುಶ್ಶಾಸನಂ ತ್ರಾತುಂ ತ್ಯಕ್ತಮುತ್ಸೃಕ್ತಮಾಯುಧಮ್ ॥
(೩-೪೮)

ಸತ್ಯಕ್ಕಿಂತ ಅಸತ್ಯ ಮತ್ತು ಸ್ವರ್ಗಕ್ಕಿಂತ ನರಕವೂ ಸಹ ನನಗೆ ಹಿತವೇ! ಏಕೆಂದರೆ ಭೀಮನ ದೆಸೆಯಿಂದ ದುಶ್ಶಾಸನನನ್ನು ರಕ್ಷಿಸಲು ಮಾತ್ರ ನಾನು ಆಯುಧತ್ಯಾಗ ಮಾಡಿದ್ದರೂ ಮಾಡಿಲ್ಲವೆಂದೇ ಬಗೆಯುತ್ತೇನೆ.

೯. ವೇಣೀಸಂಹಾರದ ಅನುಕರಣ ಕನ್ನಡ ಕಾವ್ಯಗಳಲ್ಲಿ.

ಪಂಪ ರನ್ನ ಮುಂತಾದ ಕನ್ನಡ ಕವಿಗಳು ಭಟ್ಟನಾರಾಯಣನ ವೇಣೀಸಂಹಾರದಿಂದ ಪ್ರಭಾವಿತರಾಗಿ ಆತನ ಅನೇಕ ಪದ್ಯಗಳನ್ನೂ ವಾಕ್ಸರಣಿಯನ್ನೂ ಸಹ ಅನುಸರಿಸಿರುವ ಕೆಲವು ಉದಾಹರಣೆಗಳು.

೧. ಅಶ್ವತ್ಥಾಮ—

ಮಹಾಪ್ರಲಯಮಾರುತಕ್ಷುಭಿತ ಪುಷ್ಕರಾವರ್ತಕ
ಪ್ರಚಂಡಘನಗರ್ಜಿತ ಪ್ರತಿರವಾನುಕಾರೀ ಮುಹುಃ ।
ರವಃ ಶ್ರವಣಭೈರವಃ ಸ್ಥಗಿತರೋದಸೀಕಂದರಃ
ಕುತೋಽದ್ಯ ಸಮರೋದಧೇರಯಮಭೂತಪೂರ್ವಃಪುರಃ ॥
(೩-೪)

ಅರ್ಜುನ ಕರ್ಣನನ್ನು ಎದುರಿಸಿದ ಸಂದರ್ಭ

ಮಹಾಪ್ರಳಯಭೈರವ ಕ್ಷುಭಿತಪುಷ್ಕಳಾವರ್ತನಾ
ಮಹೋಗ್ರರಿಪು ಭೂಭುಜಶ್ರವಣಭೈರವಾಡಂಬರಂ ।
ಗುಹಾಗಹನಗಹ್ವರೋದರವಿಶೀರ್ಣಮಾದಂದದೇಂ
ಮುಹುಃ ಪ್ರಕಟಮಾದುದಾ ರವಿತನೂಭವಜ್ಯಾರವಂ ॥

(ಪಂ. ಭಾ. ೧೨-೧೩೬)

೨. ಭೀಮ ಸಹದೇವನನ್ನು ಕುರಿತು ಹೇಳುವ ಮಾತು-

ಮಥ್ನಾಮಿ ಕೌರವಶತಂ ಸಮರೇ ನ ಕೋಪಾತ್
ದುಶ್ಶಾಸನಸ್ಯ ರುಧಿರಂ ನ ಪಿಬಾಮ್ಯುರಸ್ತಃ ।
ಸಂಚೂರ್ಣಯಾಮಿ ಗದಯಾ ನ ಸುಯೋಧನೋರೂ
ಸಂಧಿಂ ಕರೋತು ಭವತಾಂ ನೃಪತಿಃ ಪಣೇನ ॥

(೧-೧೫)

ಕುಡಿವೆಂ ದುಶ್ಶಾಸನೋರಸ್ಥಳಮನಗಲೆಪೋೞ್ದಾರ್ದು ಕೆನ್ನೆತ್ತರಂ ಪೊ
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮುಮುರು ಗದಾಘಾತದಿಂ
ನುಚ್ಚುನೂಱಾ ।
ಗೊಡೆವೆಂ ತದ್ರತ್ನರಶ್ಮಿಪ್ರಕಟಮುಕುಟಮಂ ಸಂಬುನಂಬೆನ್ನ ಕಣ್ಣಿಂ
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥

(ಪಂ. ಭಾ. ೭-೧೩)

ಲಾಕ್ಷಾಗೃಹಾನಲವಿಷಾನ್ನಸಭಾಪ್ರವೇಶೈಃ
ಪ್ರಾಣೇಷು ವಿತ್ತನಿಚಯೇಷು ಚ ನಃ ಪ್ರಹೃತ್ಯ ।
ಆಕೃಷ್ಯ ಪಾಂಡವವಧೂಪರಿಧಾನಕೇಶಾನ್
ಸ್ವಸ್ಥಾ ಭವಂತಿ ಮಯಿ ಜೀವತಿ ಧಾರ್ತರಾಷ್ಟ್ರಾಃ ॥

(೧-೮)

ಅಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಮಂತೊಂದೆಪಾಂ
ಚಾಲೀನಿಗ್ರಹಮೊಂದೆ ಟಕ್ಕುವಗೆಯಿಂ ಗೆಲ್ದಿರ್ದಜೂದೊಂದೆ ಶಾ।
ದೂರ್ಗಲ್ ಭೀಲವನಂಗಳೊಳ್ ತಿರಿಪಿದೀಯುಕ್ಕೊರ್ಗಂದೆ ಲೆಕ್ಕಂಗೊಳಲ್
ಕಾಲಂಸಾಲವೆ ಕಂಡುಮುಂಡುಮೆಮಗಿನ್ನಾತಂಗಳೊಳ್
ಪಾಳಿಯೇ॥ (ಪಂ.ಭಾ. ೯–೨೨)

೪) ಪ್ರವೃದ್ಧಧಿಂ ಯದ್ವೈರಂ ಮಮ ಖಲು ಶಿಶೋರೇವ ಕುರುಭಿಃ
ನ ತತ್ರಾರ್ಯೋ ಹೇತುರ್ನ ಭವತಿ ಕಿರೀಟೀ ನ ಚ ಯುವಾಮ್ ।
ಜರಾಸಂಧಸ್ಯೋರಸ್ಥಲಮಿವ ವಿರೂಢಂ ಪುನರಪಿ
ಕೃಧಾ ಸಂಧಿಂ ಭೀಮೋ ವಿಘಟಯತಿ ಯೂಯಂ ಘಟಯತ ॥
(೧–೧೦)

ಜಟಮುಟಿಸಿಕೊಂಡು ನಿಮ್ಮಾ
ಘಟಯಿಸುವೀ ಸಂಧಿ ಕೌರವರ್ಕಳೊಳೆನ್ನಿಂ।
ಘಟತ ಜರಾಸಂಧೋರ
ಸ್ತಟ ಸಂಧಿವೊಲೊಂದೆ ಪೊಯ್ತೞೊಳ್ ವಿಘಟಿಸದೇ ॥
(ಪಂ. ಭಾ. ೯.೨೪)

೫) ಅಶ್ವತ್ಥಾಮಾ ಹತ ಇತಿ ಪೃಥಾಸೂನುನಾ ಸ್ಪಷ್ಟಮುಕ್ತ್ವಾ
ಸ್ವೈರಂ ಶೇಷೇ ಗಜ ಇತಿ ಕಿಲ ವ್ಯಾಹೃತಂ ಸತ್ಯವಾಚಾ ।
ತಚ್ಛ್ರುತ್ವಾಸೌ ದಯಿತತನಯಃ ಪ್ರತ್ಯಯಾತ್ತಸ್ಯರಾಜ್ಞಃ
ಶಸ್ತ್ರಾಣ್ಯಾಜೌ ನಯನಸಲಿಲಂ ಚಾಪಿ ತುಲ್ಯಂ ಮುಮೋಚ ॥
(೩–೧೧)

ಸಾಮಜಮಶ್ವತ್ಥಾಮಂ
ನಾಮದಿನೊಂದೞಿದೊಡಲ್ಲಿ ಕಂಡು ಹತೋಽಶ್ವ ।
ತ್ಥಾಮಾ ಎನೆ ನೃಪನಶ್ವ
ತ್ಥಾಮನೆಗೆತ್ತೊಣರ್ದನೊವಜನೊರ್ವೆಸರಿಭಮಂ ॥

ಒಗೆದಸುತ ಶೋಕದಿಂದಾ
ವಗೆಯಂತೊಳಗುರಿಯೆ ಭೋಂಕನೆರ್ದೆತೆಱೆಯಲ್ ಹಾ ।
ಮಗನೇ ಎಂದಶ್ರುಜಲಾ
ರ್ದ್ರಗಂಡನಾ ಗಂಡಿನೊಡನೆ ಬಿಸುಟಂ ಬಿಲ್ಲಂ ॥
(ಪಂ. ಭಾ. ೧೨ ೨೭-೨೮)

೬. ದೇಶಃ ಸೋಽಯಮರಾತಿಶೋಣಿತಜಲೈರ್ಯಸ್ಮಿನ್ಹ್ರದಾಃ ಪೂರಿತಾಃ
ಕ್ಷಾತ್ರಾದೇವ ತಥಾವಿಧಃ ಪರಿಭವಸ್ತಾತಸ್ಯ ಕೇಶಗ್ರಹಃ ।
ತಾನೇವಾಹಿತಶಸ್ತ್ರಘಸ್ಮರಗುರೂಣ್ಯಸ್ತ್ರಾಣಿ ಭಾಸ್ವಂತಿ ಮೇ
ಯದ್ರಾಮೇಣ ಕೃತಂ ತದೇವ ಕುರುತೇ ದ್ರೋಣಾತ್ಮಜಃ
ಕ್ರೋಧನಃ ॥ (೩-೩೩)

ಗುರುಮದೀಯವಿಮೋಹದಿಂ ಕೃಪೆಯಂ ಜವಂಬಿಸುಟಂತೆ ಕೊ
ಕ್ಕರಿಸಿ ಬಿಲ್ವಿಸುಟಿರ್ದೊಡಾ ಪದದೊಳ್ ಗಡಂ ದ್ರುಪದಾತ್ಮಜಂ।
ಗುರುವ ಕೇಶಕಳಾಪಮಂ ತೆಗೆದಂತೆ ಗಂಡನುಮಾದನೀ
ಪರಿಭವಕ್ಕನುರೂಪಮಿಂಪೆಱತೊಂದುಮಿಲ್ಲಹಿಕೇತನಾ॥೩೭॥

ರಾಯೆಂಬೀಪೆಸರಿಲ್ಲದಂತುಮುೞಿಸಿಂ ಮುಯ್ಯೇೞು ಸೂೞೆಂತು ಕ
ಟ್ಟಾಯಮಂ ಪೊಂಪುೞಿವೋಗೆತಂದೆಯೞಿವಿಂಗಾಭಾರ್ಗವಂಕೊಂದನಂ
ತೀಯೆಮ್ಮಯ್ಯನಿನಾದುದೊಂದು ಪಗೆಯಿಂ ಸೀಳ್ದುಗ್ರಪಾಂಚಾಳರಾ
ಜಾ ಯುಃ ಹಾರಮನನ್ಯಭೂಪಬಲಮಂ ಪರ್ದಿಂಗೆ ಬಿರ್ದಿಕ್ಕುವೆಂ ॥
(ಪಂ. ಭಾ. ೧೨ ೩೭-೩೮)

೭. ಕೃಷ್ಣಾಯೇನ ಶಿರೋರುಹೇ ನೃಪಶುನಾ ಪಾಂಚಾಲರಾಜಾತ್ಮಜಾ
ಯೇನಾಸ್ಯಾಃ ಪರಿಧಾನಮಪ್ಯಪಹೃತಂ ರಾಜ್ಞಾಂಗುರೂಣಾಂ ಪುರಃ।
ಯಸ್ಯೋರಃಸ್ಥಲಶೋಣಿತಾಸವಮಹಂ ಪಾತುಂ ಪ್ರತಿಜ್ಞಾತವಾನ್
ಸೋಽಯಂ ಮದ್ಭುಜಪಂಜರೇ ನಿಪತಿತಃ ಸಂರಕ್ಷ್ಯತಾಂ ಕೌರವಾಃ ॥
(೩-೪೭)

ಛಲದಿಂ ಕೃಷ್ಣೆಯ ಕೇಶಮಂ ಪಿಡಿದನಿನ್ನಿಂದಾದಟಿಲ್ ನಿನ್ನರ
ಸ್ಥಲಮಂ ಪೋೞ್ದೆಪೋಪುದಲ್ತೆನಗದೇಕಳ್ಕಿರ್ದಪೈ ಬಾಷ್ಪಮಂ।
ಬಲದೇನಿಂ ನಿನಗುಂಟೆ ನಿನ್ನನುಜರಂ ಕಂಡೆಂತು ಮೇನೆನ್ನತೋ
ಳ್ಬಲೆಯೊಳ್ ಸಿಲ್ಕಿದೆಯೆಂದು ಮೂದಲಿಪುದಂ ದುಶ್ಶಾಸನಂ
ತಾಗಿದಂ॥ (ಪಂ. ಭಾ. ಆ. ೧೨–೧೪೬)

೮. ಚತ್ವಾರೋವಯಮೃತ್ವಿಜಃ ಸಭಗವಾನ್ ಕರ್ಮೋಪದೇಷ್ಟಾಹರಿಃ
ಸಂಗ್ರಾಮಾಧ್ವರದೀಕ್ಷಿತೋ ನರಪತಿಃ ಪತ್ನೀ ಗೃಹೀತವ್ರತಾ।
ಕೌರವ್ಯಾಃ ಪಶವಃ ಪ್ರಿಯಾಪರಿಭವಕ್ಲೇಶೋಪಶಾಂತಿಃ ಫಲಂ
ರಾಜನ್ಯೋಪನಿಮಂತ್ರಣಾಯ ರಸತಿ ಸ್ಫೀತಂ ಯಶೋದುಂದುಭಿಃ॥
(ವೇ. ಸಂ. ೧-೨೫)

ಅರಸಂ ದೀಕ್ಷಿತನಿಲ್ಲಿ ಋತ್ವಿಜರುಮೆಮ್ಮೀನಾಲ್ವರುಂ ಸಂಗರಾ
ಧ್ವರದೊಳ್ ತಾನುಪದೇಶಕಂ ಮುರಹರಂ ನೀನುಂ ಗೃಹೀತವ್ರತಾ।
ಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ ಕೌರವೇ
ಶ್ವರನೀತಂ ಪಶುವಾಗೆ ಬೇಳ್ದೆನಿವನಂ ಕೋಪಾಗ್ನಿಯಿಂದಗ್ನಿಜೇ॥
(ಗ. ಯು. ೮-೪೯)

೯. ಶ್ಲೋ ಏವಮಾರ್ಯೇಣಸಂದಿಷ್ಟಂ ಸುಯೋಧನಸ್ಯ ಯಥಾ

ಇಂದ್ರಪ್ರಸ್ಥಂ ವೃಕಪ್ರಸ್ಥಂ ಜಯಂತಂ ವಾರಣಾವತಮ್।
ಪ್ರಯಚ್ಛ ಚತುರೋ ಗ್ರಾಮಾನ್ಕಂಚಿದೇಕಂ ಚ ಪಂಚಮಮ್॥

ಇತಿ ತದೇವಮನಯಾ ಪ್ರತಿನಾಮಗ್ರಾಮಪ್ರಾರ್ಥನೆಯಾ ಪಂಚಮಸ್ಯ ಚಾಕೀರ್ತನಾತ್ ವಿಷಭೋಜನ, ಚತುಗೃಹದಾಹ ದ್ಯೂತಸಭಾದ್ಯಪಕಾರಸ್ಥಾನೋದ್ಘಾಟನಮೇವ ಇದಂ ಮನ್ಯಾಮಹೇ (೧. ೧೬)

ಅಂದು ಕುಶಸ್ಥಲಂ ಜತುಗೃಹಜ್ವಲನಕ್ಕೆ ಜಯಂತಮಂತೆ ಕಾ
ಳಿಂದಿ ವೃಕಸ್ಥಳಂ ವಿಷದ ಲಡ್ಡುಗೆಗಾದುದು ವಾರಣಾವತಂ।

ಸಂದ ಸಭಾಪ್ರತಾರಣಕೆ ಕಾರಣಮೆಂದರಿಪಲ್ಕೆ ಬೇಡಿದರ್
ಸಂಧಿಗೆಯಲ್ಕೆ ಬೇಡಿದರೆ ಪಾಂಡುತನೂಭವರಯ್ದು ಬಾಡಮುಂ ॥
(ಗ.ಯು.ಆ. ೩-೨೧)

೧೦. ಯುಧಿಷ್ಠಿರ :—

ಮಯಾ ಪೀತಂ ಪೀತಂ ತದನು ಭವತಾಂಬಾಸ್ತನಯುಗಂ
ಮದುಚ್ಛಿಷ್ಟೈರ್ವೃತ್ತಿಂ ಜನಯಸಿ ರಸ್ತೈರ್ವತ್ಸಲತಯಾ ।
ವಿತಾನೇಷ್ವಪ್ಯೇವಂ ತವ ಮಮ ಚ ಸೋಮೇ ವಿಧಿರಭೂತ್
ನಿವಾಪಾಂಭಃ ಪೂರ್ವಂ ಪಿಬಸಿ ಕಥಮೇವಂ ತ್ವಮಧುನಾ ॥
(೬-೩೧)

ಸುಯೋಧನ :—

ಜನನೀಸ್ತನ್ಯಮನುಂಡೆ ನಾಂ ಬಳಿಕ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತವನುಂಡೆ ನಾಂ ಬಳಿಕ ನೀಂ ಬಾಲತ್ವದಿಂದೆಲ್ಲಿಯುಂ ।
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದೈ
ಮೊನೆಯೊಳ್ನೊಳ್ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ
(ಗ.ಯು.ಆ. ೫-೭)

೧೧. ದುರ್ಯೋಧನ :—

ಕರ್ಣಾನನೇಂದುಸ್ಮರಣಾತ್ ಕ್ಷುಭಿತಃ ಶೋಕಸಾಗರಃ ।
ಬಾಡವೇನೇವ ಶಿಖಿನಾ ಪೀಯತೇ ಕ್ರೋಧಜೇನ ಮೇ॥ (೫-೧೯)

ತರಣಿಯ ತನಯನ ನೆನೆದಾ
ಸ್ಮರಣದೆ ಕೈಗುಣ್ಮಿವೆನ್ನ ಶೋಕಮಹಾಸಾ ।
ಗರಮುಂ ತವೆ ಪೀರ್ದುದು ಭೀ
ಕರಮುತ್ಕೋಪಾಗ್ನಿ ಬಾಡಬಾಗ್ನಿಯ ತೆರದಿಂ ॥ (ಗ.ಯು. ೫-೩೭)

೧೨. ಗಾಂಧಾರೀ (ಪ್ರಾಕೃತಚ್ಛಾಯೆ)

ವತ್ಸ, ಯದಿ ತ್ವಮಪ್ಯಸ್ಮಾನ್ನಾಲಪಸಿ ಕಿಮಿದಾನೀಂ ದುಶ್ಶಾಸನ ಆಲಪಿಷ್ಯತಿ ದುರ್ಮರ್ಷಣೋಽಪ್ಯನ್ಯೋ ವಾ?

(ಅಂ. ೫)

ನುಡಿದೀದುಶ್ಶಾಸನನೇಂ
ನುಡಿಯಿಸುವನೊ ಕುರುನರೇಂದ್ರ ದುರ್ಮರ್ಷಣನೇಂ।
ನುಡಿಯಿಸುವನೊ ದುಸ್ಸಹನಂ
ನುಡಿಯಿಸುವನೊ ನೀನುಮುಸಿರದಿರ್ದೊಡೆ ಮಗನೇ॥

(ಗ.ಯು.ಆ. ೩-೭೯)

೧೩. ಹೀಯಮಾನಾಃ ಕಿಲ ರಿಪೋರ್ನೃಪಾಃ ಸಂದಧತೇ ಪರಾನ್।
ದುಶ್ಶಾಸನೇ ಹತೇ ಹೀನಾಃ ಸಾನುಜಾಃ ಪಾಂಡವಾಃ ಕಥಮ್॥

(೫-೬)

ಅನುಜಸಮೇತನೊಳಂತಕ
ತನಯನೊಳನುಜವ್ಯಪೇತನೀಗಳ್ ದುರ್ಯೋಧನ।
ಧನನಳುಪಿ ಸಂಧಿಗೆಯ್ದೊಡೆ
ಮುನಿವರ ಮೆಚ್ಚುವರ ಮನಕೆ ಪಕ್ಕಾಗಿರೆನೇ॥

(ಗ.ಯು.ಆ. ೫-೪೮)

೧೦. ಕಾವ್ಯ ಸಮೀಕ್ಷೆ.

ಮಹಾಭಾರತದ ಉದ್ಯೋಗಪರ್ವ (ಶ್ರೀಕೃಷ್ಣ ಸಂಧಾನ) ದಿಂದ ಹಿಡಿದು ಗದಾಪರ್ವ(ಕೌರವವಧೆ)ದ ವರೆಗಿನ ವಿಸ್ತಾರವಾದ ಕಥಾಭಾಗವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕಥೆಯನ್ನು ಸಂಗ್ರಹಿಸುವಲ್ಲಿ ಹಾಗೂ ಹೃದಯಂಗಮ ಸನ್ನಿವೇಶಗಳನ್ನು ಕಲ್ಪಿಸಿ ಪಾತ್ರಗಳನ್ನು ಚಿತ್ರಿಸುವಲ್ಲಿ ಕವಿ ಜಾಣ್ಮೆ ತೋರಿದ್ದಾನೆ. ಆತನ ಪ್ರತಿಭೆ ಅನೇಕ ಅಂಶಗಳಲ್ಲಿ ಭಾಸ ಮೊದಲಾದವರನ್ನು ಹೋಲುತ್ತದೆ.

ಲಾಕ್ಷಣಿಕರಿಗೆ ವೇಣೀಸಂಹಾರ ಬಹು ಪ್ರಿಯವಾದ ದೃಶ್ಯ ಕಾವ್ಯ. ರತ್ನಾವಳಿ, ನಾಗಾನಂದ ಮತ್ತು ವೇಣೀಸಂಹಾರಗಳ ಕಾಲಕ್ಕೆ ನಾಟಕಲಕ್ಷಣಶಾಸ್ತ್ರ ಚೆನ್ನಾಗಿ ಬೇರೂರಿದ್ದಂತೆ ತೋರುತ್ತದೆ. ಆದ್ದರಿಂದಲೇ ಆ ತರುವಾಯದ ಕವಿಗಳು ಲಕ್ಷಣಶಾಸ್ತ್ರವನ್ನು ಅನುಸರಿಸಿಯೇ ಕೃತಿರಚನೆ ಮಾಡಿರುವುದು ಕಂಡು ಬರುತ್ತದೆ. ಪಾಕಶಾಸ್ತ್ರವನ್ನು ಮುಂದಿಟ್ಟುಕೊಂಡು ಮಾಡುವ ಅಡುಗೆಯಂತೆ ಈ ಬಗೆಯ ಕವಿ ಕೃತಿಗಳು ಹದ ಕೆಟ್ಟಿರುವುದಕ್ಕೆ ವೇಣೀಸಂಹಾರ ನಿದರ್ಶನ. ಲಕ್ಷಣಶಾಸ್ತ್ರನಿಯಮಾನುಸರಣೆ ಕಡಮೆಯಾಗಿದ್ದಿದ್ದರೆ ಈ ನಾಟಕ ಇನ್ನೂ ಎಷ್ಟೋ ಉತ್ತಮವಾಗಿರುತ್ತಿತ್ತು. ಉದಾಹರಣೆಗಾಗಿ ವೀರರಸಪ್ರಧಾನವಾದ ಈ ನಾಟಕದ ನಾಯಕ ಯುಧಿಷ್ಠಿರ. ಆತ ಕಾಣಿಸಿಕೊಳ್ಳುವುದು ನಾಟಕದ ಕಡೆಯಲ್ಲಿ. ಅವನು ಒಮ್ಮೆಯೂ ಬಿಲ್ಲು ಹಿಡಿದು ಯುದ್ಧಮಾಡಿಲ್ಲ. ಮೇಲಾಗಿ ರಂಗದಮೇಲೆ ಯುದ್ಧ ಮುಂತಾದುವನ್ನು ತೋರಿಸಬಾರದೆಂಬ ಲಾಕ್ಷಣಿಕರ ಹಂಗಿಗೊಳಗಾದ ಕವಿ ಇಡೀ ಭಾರತ ಯುದ್ಧವನ್ನೆಲ್ಲ ಸುಂದರಕ ಮತ್ತು ಪಾಂಚಾಲಕರ

ಮೂಲಕ ವರ್ಣಿಸುತ್ತಾನೆ. ಇದು ತುಂಬಾ ನೀರಸವಾಗಿ ಕಾಣುತ್ತದೆ. ಮೂರನೆಯ ಅಂಕದಲ್ಲಿ ಬರುವ ಕರ್ಣಾಶ್ವತ್ಥಾಮರು ಖಡ್ಗ ಹಿಡಿದು ಪರಸ್ಪರ ವಾಚಾ ಪ್ರತಿಭಟಿಸಿರುವುದೇ ಎಷ್ಟೋ ರಸವತ್ತಾಗಿದೆ.

ನಾಟಕದ ಐದನೆಯ ಅಂಕ ಬಹು ಮುಖ್ಯವಾದದ್ದು. ಅಲ್ಲಿ ಬರುವ ದುರ್ಯೋಧನನ ಪಾತ್ರಚಿತ್ರಣದಲ್ಲಿ ಕವಿ ತನ್ನ ಕೌಶಲವನ್ನು ಮೆರೆದಿದ್ದಾನೆ. ದುರ್ಯೋಧನನಿಗೆ ತನ್ನ ಮುಪ್ಪಿನ ತಾಯಿ ತಂದೆಗಳಲ್ಲಿದ್ದ ಭಕ್ತಿ, ವೃಷಸೇನನಲ್ಲಿನ ವಾತ್ಸಲ್ಯ, ಕರ್ಣನಲ್ಲಿದ್ದ ಆದರ್ಶ ಮೈತ್ರಿ, ಭೀಮಾರ್ಜುನರಲ್ಲಿದ್ದ ದ್ವೇಷ, ಅಶ್ವತ್ಥಾಮನಲ್ಲಿದ್ದ ತಿರಸ್ಕಾರಗಳು ಹೃದಯಂಗಮವಾಗಿ ಚಿತ್ರಿತವಾಗಿವೆ.

ಈ ಅಂಕದ ಪ್ರಾರಂಭದಲ್ಲಿಯೇ ಸಂಜಯನು ಗಾಂಧಾರಿಗೆ ದುರ್ಯೋಧನನನ್ನು ಪರಿಚಯ ಮಾಡುವಾಗ 'ಆಲದಮರದಡಿ ಸಾರ್ವಭೌಮನೊಬ್ಬನೆ ಕುಳಿದ್ದಾನೆ!' ಎಂಬ ಮಾತಿನಲ್ಲಿಯೇ ದುರ್ಯೋಧನನ ದುರವಸ್ಥೆ ಎದ್ದು ಕಾಣುತ್ತದೆ. ಮಗನನ್ನು ಕುರಿತು ತಾಯಿ ತಂದೆಗಳು ಪ್ರಶ್ನಿಸುವ ವಿಧಾನಗಳು ಕರುಣ ರಸವನ್ನು ತುಳುಕಿಸುತ್ತವೆ. ಇಲ್ಲಿ ಬೇರೆ ಬೇರೆ ಸನ್ನಿವೇಶಗಳನ್ನು ಕಲ್ಪಿಸಿ ದುರ್ಯೋಧನನ ದುರಂತಸಮಸ್ಯೆಗಳನ್ನು ಚಿತ್ರಿಸಿರುವುದು ಗಮನಾರ್ಹ.

ನಾಟಕದ ಕಡೆಯಲ್ಲಿ ಅದ್ಭುತ ರಸವನ್ನು ಅಭಿವ್ಯಂಜಿಸಲು ಕವಿ ಚಾರ್ವಾಕವೃತ್ತಾಂತವನ್ನು ಜೋಡಿಸಿರುವುದು ಅಪ್ರಕೃತವೆನಿಸುತ್ತದೆ. ಎರಡನೆಯ ಅಂಕದಲ್ಲಿ ಕಲ್ಪಿಸಿರುವ ದುರ್ಯೋಧನನ ಸ್ವೇಚ್ಛಾವಿಹಾರವು ಒಂದು ವೇಳೆ ಅನಾವಶ್ಯಕವೆನಿಸಿದರೂ

ಅದು ಪ್ರತಿನಾಯಕನಲ್ಲಿರುವ ವಿಷಯಾಭಿರತಿ ಎಂಬ ಅವಗುಣವನ್ನು ಅಭಿವ್ಯಕ್ತಿ ಮಾಡುವ ದೃಷ್ಟಿಯಿಂದ ಉಚಿತವೇ. ಮೇಲಾಗಿ ಕವಿ ಮೊದಲ ಅಂಕದಲ್ಲಿ ಚಿತ್ರಿಸಿರುವ ಭೀಮ-ದ್ರೌಪದಿಯರಿಗೂ, ಭಾನುಮತಿ-ದುರ್ಯೋಧನರಿಗೂ ವ್ಯತ್ಯಾಸವನ್ನು ತೋರಿಸುವ ದೃಷ್ಟಿಯಿಂದ ಇಲ್ಲಿ ಈ ಸನ್ನಿವೇಶವನ್ನು ಕಲ್ಪಿಸಿರಬಹುದು.

ದ್ವಂದ್ವಾರ್ಥವನ್ನು ಕೊಡುವ ಶಬ್ದ ಚಮತ್ಕಾರವನ್ನು ತರುವಲ್ಲಿ ಕವಿಯ ನೈಪುಣ್ಯ ಅನ್ಯಾದೃಶ. (i) ನಿಪತಂತಿ ಧಾರ್ತರಾಷ್ಟ್ರಾಃ (೧-೬) ಧಾರ್ತರಾಷ್ಟ್ರಾಃ—ಶರತ್ಕಾಲದ ಹಂಸಗಳು ಮತ್ತು ಧೃತರಾಷ್ಟ್ರನ ಮಕ್ಕಳು. (ii) ಸೂತ್ರಧಾರ:—ಸ್ವಸ್ಥಾ ಭವಂತು ಕುರುರಾಜಸುತಾಃ ಸಭೃತ್ಯಾಃ (೧–೭) ಭೀಮ–(ನೇಪಥ್ಯದಲ್ಲಿ)– ಸ್ವಸ್ಥಾ ಭವಂತು ಮಯಿ ಜೀವತಿ ಧಾರ್ತರಾಷ್ಟ್ರಾಃ (೧-೮) (ಪ್ರಸ್ತಾವನೆ)

(iii) ಎರಡನೆಯ ಅಂಕದಲ್ಲಿ ಬಿರುಗಾಳಿಗೆ ರಾಜನ ತೇರಿನ ಬಾವುಟ ಮುರಿದು ಬಿತ್ತು.

ಕಂಚುಕೀ—ಭಗ್ನಂ, ಭಗ್ನಂ [ಮುರಿಯಿತು, ಮುರಿಯಿತು]
ರಾಜಾ—ಕೇನ [ಯಾರಿಂದ?]
ಕಂಚುಕೀ—ಭೀಮೇನ [ಭೀಮನಿಂದ]
ರಾಜಾ—ಕಸ್ಯ [ಯಾರ?]
ಕಂಚುಕೀ—ಭವತಃ [ನಿನ್ನ]
ರಾಜಾ—(ಕೋಪದಿಂದ) ಕಿಂಪ್ರಲಪಸಿ? [ಏನು ಹರಟುವೆ?]
ಧಿಕ್ ಪ್ರಲಾಪಿನ್. ವೃದ್ಧಾಪಸದ, ಕೋಽಯಮದ್ಯ ತೇ ವ್ಯಾಮೋಹಃ?

[ಎಲೋ ಅಧಿಕ ಪ್ರಸಂಗಿ, ಮುದಿಗೂಬೆ, ಇದೇನು ಈಗ ನಿನ್ನ ಹುಚ್ಚು?]

ಕಂಚುಕೀ :— ಭಗ್ನಂ ಭೀಮೇನ ಭವತೋ ಮರುತಾ ರಥಕೇತನಮ್ ।
ಪತಿತಂ ಕಿಂಕಿಣೀಕ್ವಾಣಬದ್ಧಾಕ್ರಂದಮಿವ ಕ್ಷಿತೌ ॥ (೨-೨೪)

[ಭಯಂಕರವಾದ ಗಾಳಿಯಿಂದ ನಿನ್ನ ರಥದ ಬಾವುಟವು ಅದಕ್ಕೆ ಪೋಣಿಸಿದ್ದ ಗೆಜ್ಜೆಗಳ ಧ್ವನಿಯಿಂದ ಅಳುತ್ತಿರುವುದೋ ಎಂಬಂತೆ ಮುರಿದು ಬಿತ್ತು!]

(iv) ದುರ್ಯೋಧನ ಯುದ್ಧದಲ್ಲಿ ಗಾಯಗೊಂಡು ರಥದಲ್ಲಿ ಮೂರ್ಛಿತನಾಗಿ ಬಿದ್ದಿದ್ದಾನೆ. ಸೂತ ರಥವನ್ನು ಭೀಮನ ಕಣ್ಣು ತಪ್ಪಿಸಿ ದಟ್ಟವಾದ ಮರಗಳ ಮರೆಯಲ್ಲಿ ತಂದು ನಿಲ್ಲಿಸಿದ್ದಾನೆ. ಎಚ್ಚರಗೊಂಡ ದುರ್ಯೋಧನ ವಿಧಿಯನ್ನು ಕುರಿತು—

• ನನು ಭೋ ಹತವಿಧೇ, ಕೃಪಾವಿರಹಿತ ಭರತಕುಲವಿಮುಖ,

ಅಪಿ ನಾಮ ಭವೇನ್ಮೃತ್ಯುಃ ನ ಚ ಹಂತಾ ವೃಕೋದರಃ ।
ಘಾತಿತಾಶೇಷಬಂಧೋರ್ಮೇ ಕಿಂ ರಾಜ್ಯೇನ ಜಯೇನ ವಾ ॥ (೪-೯)

ನನಗೆ ಮರಣವಾದರೂ ಚಿಂತೆಯಿಲ್ಲ; ಆದರೆ ಅದು ವೃಕೋದರನ ಕೈಯಿಂದ ಆಗಬಾರದು. ಸಮಸ್ತ ಬಂಧುಗಳನ್ನು ಘಾತಿಸಿದ ನನಗೆ ರಾಜ್ಯವೇಕೆ? ಜಯವೇಕೆ? ಎಂಬ ಮಾತುಗಳು ದುರ್ಯೋಧನನಲ್ಲಿ ವೀರ ಮತ್ತು ಕರುಣಗಳನ್ನು ಒಮ್ಮೆಯೇ ಅಭಿವ್ಯಕ್ತ ಮಾಡುತ್ತವೆ.

v) ಕರ್ಣನ ಸಾರಥಿ ಸುಂದರಕ. ಅವನು ಯುದ್ಧ ಭೂಮಿ

ಯಿಂದ ಕರ್ಣಸಂದೇಶವನ್ನು ತಂದಿದ್ದಾನೆ. ರಾಜ ಅವನನ್ನು ಕಂಡು—

ಅಯೆ, ಸುಂದರಕ, ಕಚ್ಚಿತ್ಕುಶಲಮಂಗರಾಜಸ್ಯ ?

[ಅಯ್ಯಾ, ಸುಂದರಕ, ಅಂಗರಾಜನಿಗೆ ಕ್ಷೇಮವೆ?]

ಸುಂದರಕ—ದೇವ, ಕುಶಲಂ ಶರೀರಮಾತ್ರೇಣ !

[ಸ್ವಾಮಿ. ಶರೀರ ಮಾತ್ರದಿಂದ ಕುಶಲವೇ !]

ದುರ್ಯೋಧನ—ಕಿಂ ಕಿರೀಟಿನಾಸ್ಯ ನಿಹತಾ ಧೌರೇಯಾಃ ? ಹತಃ ಸಾರಥಿಃ ? ಭಗ್ನೋ ವಾ ರಥಃ ?

[ಏನು ಕಿರೀಟಿಯಿಂದ ಅವನ ರಥದ ಕುದುರೆಗಳು ಸತ್ತವೆ? ಸಾರಥಿಮಡಿದನೇ ? ಅಥವಾ ರಥ ಮುರಿಯಿತೆ ?]

ಸುಂದರಕ—ದೇವ, ನ ಭಗ್ನೋ ರಥಃ ; ಅಸ್ಯ ಮನೋರಥಃ !

[ಸ್ವಾಮಿ, ಅವನ ರಥಮುರಿಯಲಿಲ್ಲ ; ಆದರೆ ಮನೋರಥ!]

ಎಂಬ ಸಂವಾದದಲ್ಲಿ ದುರ್ಯೋಧನನ ಕುತೂಹಲವನ್ನು ಕೆರಳಿಸುವ ರಚನಾಕೌಶಲ ಎದ್ದು ಕಾಣುತ್ತದೆ.

ಒಂದೆರಡು ಮಾತುಗಳಿಂದಲೇ ಭಾನುಮತಿ, ಚೇಟಿ ಮುಂತಾದ ಸ್ತ್ರೀಪಾತ್ರಗಳು ಖಚಿತವಾಗಿ ಚಿತ್ರಿತವಾಗಿವೆ. ಮಾತಿನ ಚಮತ್ಕಾರ, ಮುಂದೆ ಬರುವುದನ್ನು ಸೂಚಿಸುವ ಸನ್ನಿವೇಶಗಳು ಹೃದಯಂಗಮವಾಗಿವೆ. ಭಾಷೆ ಸರಲವಲ್ಲ ; ಲಾಲಿತ್ಯ ಕಡಿಮೆ. ಗೌಡಶೈಲಿ ವೀರರಸಕ್ಕೆ ಉಚಿತವಾದರೂ ಅದು ಶೃಂಗಾರ, ಉದ್ಯಾನ ಮತ್ತು ಸೂರ್ಯೋದಯಾದಿಗಳ ವರ್ಣನೆಗಳಲ್ಲಿಯೂ ತಲೆಹಾಕಿದೆ.

ಒಟ್ಟನಲ್ಲಿ ವೇಣೀಸಂಹಾರ ಒಂದು ಉತ್ತಮ ನಾಟಕ. ಆದರ ಮೂರನೆಯ ಅಂಕ ಇಂದಿಗೂ ಅಭಿನಯಕ್ಕೆ ಚೆನ್ನಾಗಿ ಅಳವಡುತ್ತದೆ. ವೃತ್ಪಾದಕವೂ, ಸಾಮಾಜಿಕ ನೀತಿಬೋಧಕವೂ ಆದ ಈ ಗ್ರಂಥವನ್ನು ವಿದ್ಯಾರ್ಥಿಗಳು ಅವಶ್ಯ ಓದಬೇಕು. ಕನ್ನಡ ಉದ್ದಾಮ ಕವಿಗಳಾದ ಪಂಪ, ರನ್ನರ ಕಾವ್ಯಾ ಭ್ಯಾಸಿಗಳಿಗಂತೂ ಇದರ ಪರಿಚಯ ಅಪೇಕ್ಷಿತ.